



ಆದಿನ ಫೆಡರಲ್ ವಾಣಿಜ್ಯ ಆಯೋಗದ ಸಭೆಯಲ್ಲಿ, ಗೌಪ್ಯತೆ ಮತ್ತು ಕಾನೂನಿನ ಮೇಲಿನ ಚರ್ಚೆ ಬಹಳ ಬಿಸಿಯೇರಿತ್ತು. ತಂತ್ರಜ್ಞಾನ ಆಧಾರಿತ ಉದ್ಯಮಗಳ ಮುಖ್ಯಸ್ಥರು "ತಮ್ಮನ್ನು ತಾವೇ ಸ್ವ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳಲು ನಮಗೆ ತಿಳಿದಿದೆ, ಹಾಗೂ ಸರಕಾರಗಳ ಹಸ್ತಕ್ಷೇಪವಾದರೆ ಬಹಳ ದುಬಾರಿಯೂ ಹಾಗೂ ಉತ್ಪಾದನೆಯ ಮೇಲೆ ಋಣಾತ್ಮಕ ಪರಿಣಾಮಗಳು ಬೀರುತ್ತದೆ " ಎಂದು ವಾದಿಸುತ್ತಿದ್ದರು. ಅದೇ ಸಭೆಯಲ್ಲಿದ್ದ ವ್ಯಕ್ತಿ ಸ್ವಾತಂತ್ರ್ಯದ ಹೋರಾಟಗಾರರು ಈ ಸಂಸ್ಥೆಗಳ ಸೇರಲಿರುವ ಅಂಕಿ ಅಂಶಗಳು "ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಿಂದೆಂದೂ ಕಂಡರಿಯದಷ್ಟು ಪರಿಣಾಮ ಬೀರಲಿದೆ " ಎಂದು ಎಚ್ಚರಿಸಿದ್ದರು . ಒಬ್ಬರ ಅಭಿಪ್ರಾಯದ ಪ್ರಕಾರ "ನಾವೆಲ್ಲರೂ ಈಗ ವಿದ್ಯುನ್ಮಾನ ಯುಗದಲ್ಲಿ ಮನುಷ್ಯರನ್ನು ಹೇಗೆ ಕಾಣಲಿದ್ದೇವೆ ಎಂದು ತೀರ್ಮಾನಿಸ ಬೇಕಾಗಿದೆ . ನಮ್ಮನ್ನು ನಾವೇ ವ್ಯವಾಹರಿಕಾ ಚರಾಸ್ತಿಗಳಾಗಿ ಪರಿಗಣಿಸಲಿದ್ದೇವೆಯೇ ?" . "ನಾವು ಎಲ್ಲಿ ಈ ಎರಡರ ನಡುವಿನ ಗೆರೆ ಎಳೆಯಬೇಕು ?" ಎಂದು ಒಬ್ಬ ಆಯುಕ್ತರು ಪ್ರಶ್ನಿಸಿದ್ದರು . ಇದಾಗಿದ್ದು ೧೯೯೭ ನೇ ಇಸವಿಯಲ್ಲಿ

ಆ ಗೆರೆಯನ್ನು ಇಂದಿಗೂ ನಾವು ಎಳೆದೆ ಇಲ್ಲ ಹಾಗೂ ಆ ಸಂಸ್ಥೆಗಳ ಅಧಿಕಾರಿಗಳು ತಮ್ಮಿಷ್ಟದ ಹಾಗೆ ಕಾನೂನು ರಚನೆ ಯಾಗುವ ಹಾಗೆ ನೋಡಿಕೊಂಡರು . ೨೩ ವರ್ಷಗಳ ನಂತರ ಅದರ ಪರಿಣಾಮ ನಮ್ಮ ಕಣ್ಣ ಮುಂದಿದೆ. ಆ ವಿಜಯದ ಫಲವೇ ಇಂದು ನಮ್ಮೆದುರಿಗಿರುವ ಹೊಸ ವ್ಯವಸ್ಥೆ - "ಬೇಹುಗಾರಿಕಾ ಬಂಡವಾಳ ಶಾಹಿ ಅರ್ಥ ವ್ಯವಸ್ಥೆ". ಈ ವ್ಯವಸ್ಥೆಯ ಯಶಸ್ಸು ಅವಲಂಬಿತವಾಗಿರುವುದು , ನಮ್ಮ ಅಜ್ಞಾನ ಮತ್ತು ದಾರಿತಪ್ಪಿಸುವ ಹಾಗೆ ಕವಿದಿರುವ , ಸುತ್ತು ಬಳಸಿನ ಕಾನೂನು ಮತ್ತು ಅಸತ್ಯಗಳಿಂದಲೇ ನಿರ್ಮಿತವಾಗಿರುವ ಒಂದು ಬದಿಯಲ್ಲಿ ಪಾರದರ್ಶಕವಾಗಿರುವ ಕನ್ನಡಿಯಂತಹ ವ್ಯವಸ್ಥೆಯ ಮೇಲೆ . ಅದರ ಬೇರುಗಳು ನೆಲೆಯೂರಿರುವುದು ಒಂದು ಕಾಲದಲ್ಲಿ ಬೇಹುಗಾರಿಕಾ ಬಂಡವಾಳಶಾಹಿಗಳಿಂದ "ಪ್ರಪಂಚದ ಅತಿ ದೊಡ್ಡ ಸರಕಾರೀ ನಿಯಂತ್ರಣವಿಲ್ಲದ ಜಾಗ " ಎಂದು ಕರೆಸಿಕೊಳ್ಳುತ್ತಿದ್ದ ಹೊಸ ಅಂತರ್ಜಾಲ ತಾಣಗಳಲ್ಲಿ. ಆದರೆ ಅಧಿಕಾರ ಎಲ್ಲ ಖಾಲಿ ಜಾಗಗಳನ್ನು ಒಂದಲ್ಲ ಒಂದು ದಿನ ಆಕ್ರಮಿಸಿಕೊಳ್ಳುತ್ತದೆ , ಹಾಗು ಈ ಅನಿಯಂತ್ರಿತ ಜಾಲತಾಣಗಳು ಈಗ ಸರ್ಕಾರದ ಕಣ್ಣಿಗೆ ಬಿದ್ದಿವೆ . ಹಾಗೂ ಅವುಗಳು ಖಾಸಗೀ ಬೇಹುಗಾರಿಕಾ ಬಂಡವಾಳ ಶಾಹಿಗಳ ಮಾಲೀಕತ್ವದಲ್ಲಿ ಕಬ್ಬಿಣದ ಸರಪಣಿಯಲ್ಲಿ ಸಿಕ್ಕಿಹಾಕಿಕೊಂಡಿವೆ.

ಈ ಹೊಸ ಬೇಹುಗಾರಿಕಾ   ಬಂಡವಾಳಶಾಹಿ ವ್ಯವಸ್ಥೆ ಕಳೆದೆರಡು ದಶಕಗಳಲ್ಲಿ ಯಾವುದೇ ಅಡೆತಡೆಗಳಿಲ್ಲದೆ ಸಾಗಿದೆ . "ಡಿಜಿಟಲ್ " ಯುಗ ಬಹಳ ವೇಗದ ಯುಗ , ಮತ್ತು ಇದರಿಂದ ಹೊರಗುಳಿದವರು ಬಹಳ ಬೇಗ ಹಿಂದೆ ಸರಿಯುತ್ತಾರೆ ಎಂದು ನಮಗೆ ಹೇಳಲಾಗಿತ್ತು . ನಾವೆಲ್ಲರೂ ಈ ಬಿಳಿ ಮೊಲದ ಹಿಂದೆ ಓಡುತ್ತಾ ಅದರ ಬಿಲಗಳಿಗೆ , ಒಂದು ಮಾಯಾ ಲೋಕದ ನಿರೀಕ್ಷೆಯಲ್ಲಿ ಹಿಂಬಾಲಕರಾಗಿ ಸೇರಿಕೊಂಡು , ಬಹಳ ಬೇಗನೆ ಭ್ರಮನಿರಸನರಾದೆವು . ಈ ಮಾಯಾಲೋಕದಲ್ಲಿ , ಮೊದ ಮೊದಲು  ಎಲ್ಲ ಸೇವೆಗಳು ಉಚಿತ ಎಂದು ಸಂಭ್ರಮಿಸದೆವು , ಆದರೆ  ಬಹುಬೇಗ ಈ ಎಲ್ಲದರ ಹಿಂದೆ ಇರುವ ಬೇಹುಗಾರಿಕಾ   ಬಂಡವಾಳಶಾಹಿಗಳು ನಮ್ಮನ್ನು ಉಚಿತವಾದ ಸರಕಾಗಿ ನೋಡುತ್ತಿವೆ ಎಂದು ಅರಿತುಕೊಂಡೆವು . ಗೂಗಲ್ ನಲ್ಲಿ 'ಸರ್ಚ್' ಮಾಡುವುದು 'ನಾವು'  ಅಂದುಕೊಂಡಿದ್ದೆವು , ಆದರೆ ಈಗ ನಮಗೆ ಅರಿವಾಗಿದೆ 'ಗೂಗಲ್' ನಮ್ಮನ್ನು 'ಸರ್ಚ್ ' ಮಾಡುತ್ತಿದೆ  ಎಂದು. ನಾವಂದುಕೊಂಡೆವು "ಸಾಮಾಜಿಕ ಮಾಧ್ಯಮ'ಗಳನ್ನು  ನಾವು ಸಂಪರ್ಕಕ್ಕೆ ಬಳಸುತ್ತಿದ್ದೇವೆ ಎಂದು , ಆದರೆ ಈ ಸಂಪರ್ಕಗಳೆಯಿಂದಲೇ ಸಾಮಾಜಿಕ ಮಾಧ್ಯಮಗಳು ನಮ್ಮನ್ನು ಬಳಸಿಕೊಳ್ಳುತ್ತವೆ ಎಂದು , ನಾವುಗಳು ನಮ ಟಿವಿಗಾಗಲಿ  ಮತ್ತೊಂದಕ್ಕಾಗಲಿ ಖಾಸಗೀ ನಿಯಮಾವಳಿಗಳು ಯಾಕಿವೆ ಎಂದು ಪ್ರಶ್ನಿಸಿಕೊಂಡಿರಲಿಲ್ಲ , ಆದರೆ ನಿಧಾನವಾಗಿ ನಮಗೆ ಅರಿವಾಗುತ್ತಿದೆ ಈ ಖಾಸಗಿ "ನಿಯಮಾವಳಿಗಳು " ವಾಸ್ತವದಲ್ಲಿ ಬೇಹುಗಾರಿಕಾ   ನಿಯಮಾವಳಿಗಳು ಎಂದು

ಮತ್ತು ನಮ್ಮ ಪೂರ್ವಿಕರು ಮೋಟಾರು ವಾಹನಗಳನ್ನು "ಕುದುರೆಯಿಲ್ಲದ ಸವಾರಿ" ಎಂದುಕೊಂಡ ಹಾಗೆ , ನಾವು ಅಂತರ್ಜಾಲ ತಾಣಗಳನ್ನು ಯಾರು ಬೇಕಾದರೂ ತಮ್ಮ ಇಷ್ಟದ ಹಾಗೆ ಲಗತ್ತಿಸಬಹುದಾದ  " ನೋಟೀಸ್ ಬೋರ್ಡ್ " ಎಂದು ಪರಿಗಣಿಸಿದೆವು . ಹಾಗೂ ನಮ್ಮ ಕಾನೂನು ನಿರ್ಮಾಣ ಮಾಡುವವರು , ೧೯೯೬ರ  ಸಮಾಚಾರ ನಡಾವಳಿ ಕಾಯ್ದೆ ಮ್ ಸೆಕ್ಷನ್ ೨೩೦ ರ ಪ್ರಕಾರ , ಈ ಸಂಸ್ಥೆಗಳನ್ನು "ಪ್ರಕಾಶಕರು " ಮತ್ತು " ಭಾಷಣಕಾರ"ರ ಹಾಗೆ ಪರಿಗಣಿಸಿದರು.

ಆದರೆ  ಪದೇ ಪದೇ ಎದುರಾದ ಬಿಕ್ಕಟ್ಟುಗಳ ಮೂಲಕ ನಾವರಿತು ಕೊಂಡಿದ್ದೇನೆಂದರೆ , ಈ ಜಾಲತಾಣಗಳು "ನೋಟೀಸ್ ಬೋರ್ಡ್ "ಗಳಲ್ಲದೆ ,  ಹೊಸ ಅಪಾಯಕಾರಿ ವೈರಸ್ ಗಳನ್ನೂ ಯಾರುಬೇಕಾದರು ತಂದು ಬಿಟ್ಟು   ಎಲ್ಲೆಡೆ ತಲುಪಬಹುದಾದ ರಕ್ತನಾಳಗಳು ಎಂದು . ಮಾರ್ಕ್ ಝುಕರ್ಬರ್ಗ್ , ಕಾನೂನಿನ ಪ್ರಕಾರವೇ , ಒಂದು "ಸುಳ್ಳು " ವಿಡಿಯೋ ವನ್ನು ತೆಗೆದು ಹಾಕದೆ ಫೇಸ್ಬುಕ್ ನಲ್ಲಿ ಉಳಿಸಿಕೊಂಡ , ಮತ್ತು , ರಾಜಕೀಯ ಜಾಹಿರಾತುಗಳನ್ನು ಯಾವುದೇ ಸತ್ಯಾಂಶ ಪರಿಶೀಲಿಸದೆ ಫೇಸ್ಬುಕ್ ನಲ್ಲಿ ಪ್ರಕಟಿಸಬಹುದು ಎಂದು ಘೋಷಿಸಿದ.

ಈ ಎಲ್ಲ ಭ್ರಮೆಗಳೂ ನಿಂತಿರುವುದು , ಇವೆಲ್ಲಕ್ಕಿಂತ ಪ್ರಚಂಡ ಭ್ರಮೆಯಾದ , “ಗೌಪ್ಯತೆ ಎನ್ನುವುದು ಖಾಸಗಿ” ಎನ್ನುವ ನಂಬಿಕೆಯ ಮೇಲೆ . ನಾವೆಲ್ಲರೂ ನಮ್ಮಖಾಸಗೀತನವನ್ನು  , ಕೆಲವೊಂದು ಅನುಕೂಲಕ್ಕಾಗಿ  , ಎಷ್ಟರ ಮಟ್ಟಿಗೆ ಬಿಟ್ಟುಕೊಡಬಹುದು ಎಂದು ಲೆಕ್ಕ ಹಾಕಬಹುದು ಎಂದು ನಂಬಿಕೊಂಡಿದ್ದೆವು . "ಒಂದಷ್ಟು ಬಿಟ್ಟು ಕೊಟ್ಟು, ಒಂದಷ್ಟು ಪಡೆ" ಎನ್ನುವ ಹಾಗೆ . ಉದಾಹರಣೆಗೆ  ಡೆಲ್ಟಾ ಏರ್ ಲೈನ್ಸ್ ನವರು ಅಟ್ಲಾಂಟ ಏರ್ಪೋರ್ಟ್ ನಲ್ಲಿ "ಬಯೋ ಮೆಟ್ರಿಕ್ " ಅಂಕಿ ಅಂಶ ಸಂಗ್ರಹ ಮಾಡುವ ವ್ಯವಸ್ಥೆ ಜಾರಿಗೆ ತಂದಾಗ , ಆ ಏರ್ಪೋರ್ಟ್ ಮೂಲಕ  ಪ್ರತೀ ವಾರ ಪ್ರಯಾಣ ಮಾಡುವ ೨೫೦೦೦ ಪ್ರಯಾಣಿಕರು , ೯೮%  , ಈ ವ್ಯವಸ್ಥೆಗೆ ಯಾವುದೇ  ಅಡೆ ತಡೆ ಇಲ್ಲದೆ ಒಪ್ಪಿಗೆ ನೀಡಿದ್ದರು , ಅವರ ಪ್ರಕಾರ ಈ ವ್ಯವಸ್ಥೆಯಿಂದ ಪ್ರತೀ ಪ್ರಯಾಣಿಕರಿಗೂ ೨ ಸೆಕೆಂಡ್ ಸಮಯ ಉಳಿತಾಯವಾಗುತ್ತದೆ , ಹಾಗು ಪ್ರಯಾಣವೊಂದಕ್ಕೆ ಒಟ್ಟು ೯ ನಿಮಿಷಗಳ ಉಳಿತಾಯವಾಗುತ್ತದೆ ಎನ್ನುವುದು ಅವರ ವಾದ

ಈ ಬಗೆಯ  ಜೈವಿಕ ದತ್ತಾಂಶಗಳನ್ನು ಅವಲಂಬಿಸಿ ಅಭಿವೃದ್ಧಿಯಾಗುವ ವ್ಯವಸ್ಥೆಗಳು , 'ಖಾಸಗಿ ವ್ಯಕ್ತಿ'ಗಳ ಒಪ್ಪಿಗೆಯಿಂದಾಗುವ ಸಾಮಾಜಿಕ ಪರಿಣಾಮಗಳ ಬಗ್ಗೆ ಒಳ ನೋಟ ನೀಡುತ್ತವೆ, ಈ ಬೇಹುಗಾರಿಕಾ   ಬಂಡವಾಳಶಾಹಿಗಳು , ನಾವು   ರಸ್ತೆಯಲ್ಲಿದ್ದಾಗಾಗಲಿ, ಫೇಸ್ಬುಕ್ ನಲ್ಲಾಗಲಿ , ನಮ್ಮ ಮುಖದ ಚಹರೆಗಳನ್ನು  ಸಂಗ್ರಹಿಸುವ ಹಕ್ಕನ್ನು ಕೇಳುತ್ತಿದ್ದಾರೆ . "the financial times " ವರದಿಯ ಪ್ರಕಾರ ಮೈಕ್ರೋಸಾಫ್ಟ್ ನವರ ಮುಖದ ಚಹರೆ ಗುರುತಿಸುವ ವ್ಯವಸ್ಥೆಯ , ಅಂತರ್ಜಾಲ ತಾಣಗಳಿಂದ ೧ ಕೋಟಿ ಜನರ ಭಾವಚಿತ್ರಗಳನ್ನು ಯಾರ ಅರಿವಿಗೂ ಬಾರದ ಹಾಗೆ ಸಂಗ್ರಹಿಸಿದೆ  ಮತ್ತು ಈ ಭಾವಚಿತ್ರಗಳನ್ನು ಐಬಿಎಂ  ಮತ್ತು ಸರಕಾರೀ ಸಂಸ್ಥೆಗಳಾದ ಅಮೇರಿಕಾ ಮತ್ತು ಚೈನೀಸ್ ಮಿಲಿಟರಿ ಸಂಶೋಧನಾಲಯಗಳಿಗೆ ಒದಗಿಸಿದೆ . ಇವುಗಳಲ್ಲಿ ಎರಡು ಸಂಸ್ಥೆಗಳು ಚೀನಾದ xinjiang ನಲ್ಲಿ   Uighur community ಯವರು ಇರುವ ತೆರೆದ ಜೈಲುಗಳಿಗೆ ಉಪಕರಣಗಳನ್ನು ಒದಗಿಸುವವರು, ಹಾಗೂ  ಈ ಜೈಲುಗಳು ಮುಖ ಚಹರೆ ಆದರಿಸಿದ ಬೇಹುಗಾರಿಕಾ   ವ್ಯವಸ್ಥೆ ಹೊಂದಿವೆ.

ಗೌಪ್ಯತೆ  ಖಾಸಗಿಯಲ್ಲ , ಯಾಕೆಂದರೆ ಹೀಗೆ ಖಾಸಗಿ ಹಾಗೂ ಸಾರ್ವಜನಿಕ ಬೇಹುಗಾರಿಕಾ   ವ್ಯವಸ್ಥೆಗಳ ಪರಿಣಾಮ ನಿರ್ಧರಿತವಾಗುವುದು , ನಾವು ಹೀಗೆ ಒಬ್ಬೊಬ್ಬರಾಗಿ ಬಿಟ್ಟುಕೊಟ್ಟ  , ಅಥವಾ  ನಮ್ಮರಿವಿಗೆ ಬಾರದ ಹಾಗೆ ನಮ್ಮಿಂದ ಕದ್ದುಕೊಂಡ , ನಮ್ಮ ಸಣ್ಣ ಸಣ್ಣ ಖಾಸಗಿ ವಿಷಯಗಳ ಮೇಲೆ.

ನಮ್ಮ ಈ ಡಿಜಿಟಲ್ ಶತಮಾನ ಪ್ರಜಾಪ್ರಭುತ್ವದ ಸುವರ್ಣ ಯುಗವಾಗಬೇಕಿತ್ತು , ಆದರೆ ಅದರ ಬದಲಾಗಿ ಈ ಮೂರನೇ ದಶಕಕ್ಕೆ ನಾವು ಪ್ರವೇಶಿಯುವಾಗ ನಮ್ಮ ಮುಂದಿರುವ ನಿಜವಾದ ಸವಾಲೆಂದರೆ  "ಜ್ಞಾನದ ಅಸಮಾನತೆಯಿಂದ " ಸೃಷ್ಟಿಯಾದ ಸಾಮಾಜಿಕ ಅಸಮಾನತೆ . ಈ ಜ್ಞಾನದ ಬೃಹತ್ ಅಸಮಾನತೆ pre-Gutenberg ಕಾಲವನ್ನು ನೆನಪಿಗೆ ತರುತ್ತಿದೆ  ಮತ್ತು ಈ ಅಸಮಾನತೆಗೆ ಮೂಲ ಕಾರಣವಾಗಿ , ಎಲ್ಲ ಮಾಹಿತಿಗಳನ್ನು ತಮ್ಮ ಬಳಿ ಕ್ರೋಢೀಕರಿಸಿಕೊಂಡಿರುವ ತಂತ್ರಜ್ಞಾನ ದೈತ್ಯ ಸಂಸ್ಥೆಗಳಿವೆ . "ಗೌಪ್ಯತೆ ಎನ್ನುವುದು ಖಾಸಗಿ " ಎನ್ನುವ ಭ್ರಮೆಯ ಯನ್ನು ಬಳಸಿ  ಯಾರೂ ಎದುರು ನೋಡದ  ಹೊಸ ಸಾಮಾಜಿಕ ಧ್ರುವೀಕರಣವನ್ನು ಸೃಷ್ಟಿಸಲಾಗಿದೆ .  ಈ ಬೇಹುಗಾರಿಕಾ   ಬಂಡವಾಳಶಾಹಿಗಳು ಈ ಜ್ಞಾನದ ಅಸಮಾನತೆಯನ್ನು ಬಳಸಿಕೊಂಡು  ಲಾಭಗಳಿಸುವ ಹುನ್ನಾರದಲ್ಲಿ ತೊಡಗಿವೆ . ಇವರು ನಮ್ಮ ಅರ್ಥವ್ಯವಸ್ಥೆಯನ್ನು , ಸಮಾಜವನ್ನು ಹಾಗೆಯೇ ನಮ್ಮ ಬದುಕನ್ನೂ ಸಹ ಚಾಣಕ್ಯತನದಿಂದ ತಮ್ಮ ಅಧೀನಕ್ಕೆ ತೆಗೆದುಕೊಂಡು ಕೇವಲ ನಮ್ಮ ಖಾಸಗೀ ಬದುಕನ್ನಷ್ಟೇ ಅಲ್ಲದೆ ಪ್ರಜಾಪ್ರಭುತ್ವವನ್ನೇ ಅಪಾಯಕ್ಕೀಡುಮಾಡುತ್ತಿದ್ದಾರೆ .  ನಮ್ಮ ಭ್ರಮೆಗಳಲ್ಲಿ ಮುಳುಗಿಹೋಗಿ , ಈ ರಕ್ತ ರಾಹಿತ್ಯವಾದ ಕ್ರಾಂತಿ ಸದ್ದಿಲದೆ ನಮ್ಮ ಮೇಲೆರಗಿದ್ದನ್ನು ನಾವು ಗಮನಿಸುವಲ್ಲಿ ಸೋತಿದ್ದೇವೆ .

"ಗೌಪ್ಯತೆ ಅನ್ನುವುದು ಖಾಸಗಿ " ಅನ್ನುವ ನಮ್ಮ ನಂಬಿಕೆ. ನಮ್ಮನ್ನು ನಾವು ಬಯಸದ ಭವಿಷ್ಯಕ್ಕೆ ತಳ್ಳುತ್ತಿದೆ , ಯಾಕೆಂದರೆ , ವ್ಯಕ್ತಿ ಸ್ವಾತಂತ್ರ್ಯವೇ ಸರ್ವೋತ್ತಮ ಎಂದು  ನಂಬುವ ಸಮಾಜಕ್ಕೂ , ಒಂದು ಬದಿ  ಪಾರದರ್ಶಕವಾಗಿರುವ  ಕನ್ನಡಿಯ ಹಾಗೆ ಕಾರ್ಯ ನಿರ್ವಹಿಸುವ, ಅಪಾರದರ್ಶಕ  ಸಮಾಜಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸಲು ಇದು ಸಂಪೂರ್ಣವಾಗಿ ಸೋತಿದೆ  ಮತ್ತು ಇದರಿಂದ ನಾವು ಕಲಿಯಬೇಕಾದ ಪಾಠವೇನೆಂದರೆ ,  ಗೌಪ್ಯತೆ ಅನ್ನುವುದು ಸಾರ್ವಜನಿಕ ಹಾಗೂ ಸಮುದಾಯದ ಒಳಿತು ಯಾವಾಗಲೂ ತಾರ್ಕಿಕವಾಗಿ ಮತ್ತು ನೈತಿಕವಾಗಿ ಒಂದನ್ನೊಂದು ಬೇರ್ಪಡಿಸಲಾಗದ ಹಾಗೆ ಮನುಷ್ಯರ ಸ್ವಾಯತ್ತತೆಯ ಮೌಲ್ಯಗಳ ಮೇಲೆ ಅವಲಂಬಿತವಾಗಿವೆ. ಗೌಪ್ಯತೆ ಎನ್ನುವುದು ನಮ್ಮೆಲ್ಲರ ಆತ್ಮ ಸಂಕಲ್ಪದ ಮೇಲೆ ಅವಲಂಬಿತವಾಗಿದೆ , ಅದಿಲ್ಲದೆ ಪ್ರಜಾ ಪ್ರಭುತ್ವವನ್ನು ಕಲ್ಪಿಸಿಕೊಳ್ಳುವುದೂ ಅಸಾಧ್ಯ.

ಇಷ್ಟೆಲ್ಲದರ ನಡುವೆಯೂ, ಕೊನೆಗೂ ಗಾಳಿ ತನ್ನ ದಿಕ್ಕನ್ನು ಬದಲಿಸಿದ ಹಾಗೆ ತೋರುತ್ತಿದೆ . ಒಂದು ಸಣ್ಣ ಅರಿವು ನಿಧಾನವಾಗಿ , ಆ ಮೊಲದ ಬಿಲದಿಂದ ಮರಳಿ ತೆವಳುತ್ತಿರುವಾಗ,ನಮ್ಮಲ್ಲಿ ಮೂಡುತ್ತಿದೆ. ಬೇಹುಗಾರಿಕಾ ಬಂಡವಾಳಶಾಹಿಗಳು ಬಹಳ ತ್ವರಿತಗತಿಯಲ್ಲಿದ್ದಾರೆ, ಯಾಕೆಂದರೆ ಅವರಿಗೆ ನಮ್ಮ ನಿಜವಾದ ಅನುಮತಿಯಾಗಲಿ ಅಥವಾ ಒಪ್ಪಂದವಾಗಲಿ ಬೇಕಾಗಿಲ್ಲ . ಅವರು ಅವಲಂಬಿತರಾಗುವುದು ಮಾನಸಿಕ ಒತ್ತಡಗಳ ಮೇಲೆ ಮತ್ತು ಬೇರೊಂದು ದಾರಿಯೇ ಸಾಧ್ಯವಿಲ್ಲ ಎನ್ನುವ ಅಸಾಹಾಯಕ ಭಾವನೆಗಳ ಮೇಲೆ , ಶರಣಾಗತಿ ಮತ್ತು ಗೊಂದಲಗಳ ಮೂಲಕ ತಮ್ಮ ಬೇಟೆಯನ್ನು ನಿಶ್ಚಲಗೊಳಿಸುತ್ತಾರೆ . ಪ್ರಜಾಪ್ರಭುತ್ವ ಕಾರ್ಯ ನಿರ್ವಹಿಸುವುದು ನಿಧಾನ , ಮತ್ತು ಅದು ಒಂದು ರೀತಿಯಲ್ಲಿ ಒಳ್ಳೆಯದೇ . ಕೋಟ್ಯಂತರ ಜನರ ಕೌಟುಂಬಿಕ ಮಾತುಕತೆಗಳ ಮೇಲೆ , ಸಮುದಾಯಗಳ ಮಾತುಕತೆ , ಸಹೋದ್ಯೋಗಿಗಳ , ಸ್ನೇಹಿತರ ನಡುವಿನ ಮಾತುಕತೆ , ನಗರಗಳು ಮತ್ತು ರಾಜ್ಯಗಳ ಮಾತುಕತೆ , ನಿಧಾನವಾಗಿಯಾದರೂ ಪ್ರಜಾಪ್ರಭುತ್ವ ವನ್ನು ಎಬ್ಬಿಸಿ ಕೆಲಸ ಮಾಡುವಂತೆ ಪ್ರೇರೇಪಿಸುತ್ತದೆ.

ಇಂತಹ ಮಾತುಕತೆಗಳು ಎಲ್ಲೆಡೆ ಜರುಗುತ್ತಿವೆ , ಮತ್ತು ರಾಜಕಾರಣಿಗಳು ಈಗಲಾದರೂ ಈ ಚರ್ಚೆಗಳಲ್ಲಿ ಪಾಲುಗೊಂಡು ಮುಂಚೂಣಿ ವಹಿಸುವ ಲಕ್ಷಣಗಳು ಕಾಣಿಸುತ್ತಿವೆ , ಈ ಮೂರನೇ ದಶಕ ನಮ್ಮ ಭವಿಷ್ಯವನ್ನು ನಿರ್ಧರಿಸುವ ದಶಕವಾಗಲಿದೆ . ನಾವು ಈ ಡಿಜಿಟಲ್ ಪ್ರಪಂಚವನ್ನು ಉತ್ತಮ ಗೊಳಿಸುತ್ತೇವೆಯೇ ಅಥವಾ ಇನ್ನಿಯಷ್ಟು ಹಾಳುಗೆಡವುತ್ತೇವೆಯೇ ? ನಮ್ಮೆಲ್ಲರಿಗೂ ಸೇರಿದ ಅಜಾಗ ಇದು ಎನ್ನುವ ಹಾಗೆ ಮಾಡುತ್ತೇವೆಯೇ ?

ಈ ಜ್ಞಾನದ ಅಸಮಾನತೆ ಅವಲಂಬಿತವಾಗಿರುವುದು ನಾವೆಷ್ಟು ಸಂಪಾದಿಸುತ್ತೇವೆ ಎನ್ನುವುದರ ಮೇಲಲ್ಲದೆ ನಾವೆಷ್ಟು ಕಲಿಯುತ್ತೇವೆ ಎನ್ನುವುದರ ಮೇಲೆ . ಖಾಸಗೀ ವಾಣಿಜ್ಯ ಸಂಸ್ಥೆಗಳು ತಮ್ಮ ಸ್ವಾಧೀನದಲ್ಲಿರಿಸಿಕೊಂಡಿರುವ , ಉತ್ಪಾದನೆ , ಮಾರಾಟ ಮತ್ತು ಲಾಭದ ಅಂಕಿಅಂಶಗಳ ಮೇಲಿನ ಅಸಾಮಾನ ಹಿಡಿತದ ಮೇಲೆ ಅವಲಂಬಿತವಾಗಿದೆ . ಇದಕ್ಕೆ ಅತ್ಯುತ್ತಮ ನಿದರ್ಶನ ಎಂದರೆ , ನಮಗೆಷ್ಟು ಗೊತ್ತು ಮತ್ತು ನಮ್ಮ ಬಗ್ಗೆ ಅವರಿಗೆಷ್ಟು ಗೊತ್ತು ಎನ್ನುವುದರ ನಡುವಿನ ಕಂದರ ದಿನದಿಂದ ದಿನಕ್ಕೆ ಹಿರಿದಾಗುತ್ತಿರುವುದು

೨೦ನೇ ಶತಮಾನದ ಕೈಗಾರಿಕಾ ಸಮಾಜ "ದುಡಿಮೆಯ ಹಂಚಿಕೆ" ಮೇಲೆ ಅವಲಂಬಿತವಾಗಿತ್ತು ಮತ್ತು ಆರ್ಥಿಕ ಸಮಾನತೆ ರಾಜಕೀಯದ ದಿಕ್ಕನ್ನು ನಿರ್ಧರಿಸುತ್ತದೆ ಎಂದು ನಂಬಲಾಗಿತ್ತು. ನಮ್ಮ ಡಿಜಿಟಲ್ ಶತಮಾನ, ಸಮಾಜದ ಅಳತೆಗೋಲನ್ನು ದುಡಿಮೆಯ ಹಂಚಿಕೆಯಿಂದ "ಕಲಿಕೆಯ ಹಂಚಿಕೆ"ಯ ಕಡೆಗೆ ಕೊಂಡೊಯ್ಯುತ್ತಿದೆ ಮತ್ತು ಈ ಜ್ಞಾನಕ್ಕಾಗಿನ ಹೋರಾಟದಲ್ಲಿ , ಜ್ಞಾನದ ಕ್ರೋಢೀಕರಣ ಮಾಡಿಕೊಂಡಿರುವ ಸಂಸ್ಥೆಗಳು ರಾಜಕೀಯವನ್ನು ನಿರ್ಧರಿಸುತ್ತವೆ

ಈ ಜ್ಞಾನದ ಅಸಮಾನತೆಯ ಹೊಸ ಕೇಂದ್ರಗಳು, ಅಧಿಕಾರ ಕೇಂದ್ರಗಳು ಬದಲಾಗುತ್ತಿರುವುದನ್ನು ಸೂಚಿಸುತ್ತವೆ ಮತ್ತು ೨೦ನೇ ಶತಮಾನದ ರಾಜಕೀಯವನ್ನು ನಿರ್ಧರಿಸಿದ ಉತ್ಪಾದನಾ ವಿಧಾನಗಳ ಮೇಲಿನ ನಿಯಂತ್ರಣ ಬದಲಾಗುತ್ತಿರುವುದನ್ನು ಸೂಚಿಸುತ್ತವೆ . ಈ ಜ್ಞಾನದ ಸಮಾನತೆ ಮತ್ತು ಜ್ಞಾನದ ಹಕ್ಕುಗಳನ್ನು ಈ ಹೊಸ ಜಗತ್ತಿನಲ್ಲಿ ನಿರ್ಧರಿಸುವ ಮೂರು ಅಂಶಗಳನ್ನು ಸಂಕ್ಷೇಪ್ತವಾಗಿ ಹೇಳಬೇಕೆಂದರೆ : ಯಾರಿಗೆ ತಿಳಿದಿದೆ ? ಯಾರಿಗೆ ತಿಳಿದಿರಬೇಕು ಎಂದು ಯಾರು ನಿರ್ಧರಿಸುತ್ತಾರೆ ? ಯಾರಿಗೆ ತಿಳಿದಿರಬೇಕು ಎಂದು ನಿರ್ಧರಿಸುವವರನ್ನು ಯಾರು ನಿರ್ಧರಿಸುತ್ತಾರೆ ?

ಕಳೆದೆರಡು ದಶಕಗಳಲ್ಲಿ , ಮುಂಚೂಣಿಯಲ್ಲಿದ್ದ ಬೇಹುಗಾರಿಕಾ ಬಂಡವಾಳಶಾಯಿಗಳಾದ ಗೂಗಲ್ , ನಂತರ ಹಿಂದೆಯೇ ಬಂದ ಫೇಸ್ ಬುಕ್ , ಅಮೆಜಾನ್ ಮತ್ತು ಮೈಕ್ರೋಸಾಫ್ಟ್ ಈ ಸಮಾಜ ದ ಬದಲಾವಣೆಯ ಮುಂಚೂಣಿಯಲ್ಲಿದ್ದ ಹಾಗೆಯೇ ಜ್ಞಾನದ ಹೊಸ ಶ್ರೇಣೀಕೃತ ವ್ಯವಸ್ಥೆಯ ಉತ್ತುಂಗವನ್ನು ತಲುಪವಲ್ಲಿ ಸಹ ಯಶಸ್ವೀ ಯಾಗಿವೆ . ಬಹಳ ನಿಗೂಢವಾಗಿ ಕಾರ್ಯ ನಿರ್ವಹಿಸುತ್ತಾ , ನಮ್ಮ ಒಪ್ಪಿಗೆಯನ್ನೂ ಕೇಳದೆ , ಯಾವ ಮಗುವಿಗೂ ಕಳ್ಳತನ ಎಂದು ಅರಿವಾಗುವ ಹಾಗೆ , ಅಸಾಧ್ಯ ಪ್ರಮಾಣದ ಮಾಹಿತಿಯನ್ನು ತಮ್ಮ ಬಳಿ ಶೇಖರಿಸಿಕೊಂಡಿದ್ದಾರೆ , ಈ ಬೇಹುಗಾರಿಕಾ ಬಂಡವಾಳಶಾಹಿ ವ್ಯವಸ್ಥೆ ಏಕಪಕ್ಷೀಯವಾಗಿ ಮನುಷ್ಯನ ಖಾಸಗಿ ಅನುಭವಗಳನ್ನು ತಮ್ಮದಾಗಿಸಿಕೊಂಡು , ಮನುಷ್ಯನ ನಡಾವಳಿಯ ರೇಖಾಚಿತ್ರ ರಚಿಸಲು ಬೇಕಾಗುವ ಕಚ್ಚಾ ವಸ್ತುಗಳ ಹಾಗೆ ಬಳಸಿಕೊಂಡಿವೆ , ನಮ್ಮ ಬದುಕುಗಳನ್ನು ಅಂಕಿ ಅಂಶಗಳಾಗಿ ನೋಡಲಾಗುತ್ತಿದೆ

ಮೊದಲಿಗೆ ನಮ್ಮ ಅರಿವಿಗೆ ಬಂದಿದ್ದು ಅಂದರೆ , ಬಳಕೆದಾರರಿಗೆ ತಿಳಿಯದ ಹಾಗೆ ಸಂಗ್ರಹಿಸಿದ ಅಂಕಿಅಂಶಗಳಿಂದ , ಸಾಕಷ್ಟು ಮುಖ್ಯವಾದ ಮುನ್ಸೂಚನೆಗಳನ್ನು ನೀಡಿ , ಬಳಕೆದಾರರ ಸೇವೆಯನ್ನು ಉತ್ತಮಗೊಳಿಸಲು ಬಳಸ ಬಹುದು ಎಂದು . ನೀವು ಏನನ್ನು ಪೋಸ್ಟ್ ಮಾಡುತ್ತೀರಿ ಎನ್ನುವುದಷ್ಟೆ ಅಲ್ಲದೇ , ನೀವು ನಿಮ್ಮ ಪೋಸ್ಟ್ನಲ್ಲಿ ಆಶ್ಚರ್ಯಕಾರಕ ಚಿಹ್ನೆಗಳನ್ನು ಬಳಸುತ್ತೀರಾ , ನಿಮ್ಮ ಫೋಟೋಗಳ ಬಣ್ಣದ ಪ್ರಮಾಣವೆಷ್ಟು ; ನೀವೆಲ್ಲಿ ನಡೆದಾಡಿದ್ದೀರಿ ಎನ್ನುವುದಷ್ಟೆ ಅಲ್ಲ, ನಿಮ್ಮ ಭುಜ ಯಾವ ಕಡೆ ವಾಲಿತ್ತು ; ನಿಮ್ಮ ಮುಖದ ಚಹರೆಯಷ್ಟೇ ಅಲ್ಲ, ನಿಮ್ಮ ಚಹರೆಯಲ್ಲಿನ ಸೂಕ್ಷ್ಮ ಭಾವನೆಗಳೇನು ; ಇಂತಹ ಎಷ್ಟೋ ಅಂಶಗಳನ್ನು ನಿಗೂಢವಾಗಿ ಸಂಗ್ರಹಿಸಿ , ನಿಮ್ಮ ಅಂಕಿಅಂಶಗಳ ಮಾಲೀಕತ್ವದ ಹಕ್ಕನ್ನು ಪಡೆದುಕೊಂಡವು

ಈ ಸಂಗ್ರಹವಾದ ಅಂಕಿಅಂಶಗಳು ಸಂಕೀರ್ಣವಾದ ಸರಬರಾಜು ಸರಪಣಿ ಉಪಕರಣಗಳು , ಮಾನಿಟರಿಂಗ್ ಸಾಫ್ಟ್ವೇರ್ ಮತ್ತು ಸಾಕಷ್ಟು ಬಳಕೆದಾರ ಸಾಫ್ಟ್ವೇರ್ ಮೂಲಕ ಹಾದು ಹೋಗಿ , ಅಂಕಿ ಅಂಶಗಳನ್ನು ವಿಶ್ಲೇಷಿಸಿ ಹೊಸ ಮಾಹಿತಿಗಳನ್ನು ನೀಡುತ್ತವೆ . ಉದಾಹರಣೆಗೆ , The Wall Street Journal ನವರು ನಡೆಸಿದ ಒಂದು ಪ್ರಯೋಗದ ಪ್ರಕಾರ , ಫೇಸ್ ಬುಕ್ ನಿಮ್ಮ ಹೃದಯ ಬಡಿತದ ಅಂಕಿಅಂಶವನ್ನು HR monitor ಸಾಫ್ಟ್ವೇರ್ ಮೂಲಕ , ಋತುಮತಿಯ ಅಂಕಿ ಅಂಶಗಳನ್ನು Flo Period & Ovulation Tracker ನ ಮೂಲಕ , ಮತ್ತು ನಿಮ್ಮ ರಿಯಲ್ ಎಸ್ಟೇಟ್ ಆಸಕ್ತಿಗಳನ್ನು Realtor.com ಮೂಲಕ - ಬಳಕೆದಾರರ ಅರಿವೆಗೆ ಬಾರದ ಹಾಗೆ ಸಂಗ್ರಹಿಸುತ್ತವೆ.

ಈ ಅಂಕಿ ಅಂಶಗಳು ಬೇಹುಗಾರಿಕಾ ಬಂಡವಾಳಶಾಹಿಗಳ ಸಂಶ್ಲೇಷಣಾ ಕಾರ್ಖಾನೆಗಳಾದ "ಕೃತಕ ಬುದ್ಧಿಶಕ್ತಿ " ಯ ಕಡೆಗೆ ಹರಿಯುತ್ತವೆ . ಹಾಗೂ ಈ ಕಾರ್ಖಾನೆಗಳಲ್ಲಿ ನಮ್ಮ ನಡಾವಳಿಗಳ ಮುನ್ಸೂಚಕಗಳಾಗಿ ಬದಲಾಗುತ್ತವೆ , ಅವು ನಮ್ಮ ಬಗ್ಗೆಯಾದರೂ ನಮಗಾಗಿ ಅಲ್ಲ . ಬದಲಾಗಿ , ಈ ಅಂಕಿಅಂಶಗಳು ಹೊಸ ಬಗೆಯ ಮಾರುಕಟ್ಟೆಗೆ ಉತ್ಪಾದಕರಾಗಿರುವ ವ್ಯಾಪಾರಿಗಳಿಗೆ ಮಾರಾಟವಾಗುತ್ತವೆ . ಮನುಷನ ಸ್ವಭಾವಗಳ ಸರಿಯಾದ ಮುನ್ಸೂಚಕಗಳು ಇಂತಹ ಹೊಸ ಮಾರುಕ್ಕಟ್ಟೆಗೆ ಅತ್ಯಂತ ಅವಶ್ಯಕವಾದ್ದರಿಂದ , ಬೇಹುಗಾರಿಕಾ ಬಂಡವಾಳಶಾಹಿಗಳು ತಮ್ಮ ಭವಿಷ್ಯದ ಮುನ್ಸೂಚಕಗಳ ಗುಣಮಟ್ಟಕ್ಕಾಗಿ ಶ್ರಮ ಪಡುತ್ತವೆ. ಇದು ಈ ಹೊಸ ಜಗತ್ತಿನ ಅತ್ಯಂತ ಶ್ರೀಮಂತ ಮತ್ತು ಬಲಶಾಲಿ ಕಂಪನಿಗಳ ಇತಿಹಾಸ.

ತಮ್ಮ ಈ ಗುರಿ ಮುಟ್ಟಲು , ಮುಂಚೂಣಿಯಲ್ಲಿರುವ ಬೇಹುಗಾರಿಕಾ  ಬಂಡವಾಳಶಾಹಿಗಳು ಜಗತ್ತಿನ ಡಿಜಿಟಲ್ ಮಾಹಿತಿ ಪ್ರಪಂಚದ ೯೯. ೯ ಪ್ರತಿಶತ ಅಂಕಿಅಂಶಗಳ ಮೇಲೆ ಪ್ರಾಬಲ್ಯ ತೋರಿಸಬೇಕಾಗಿದೆ . ಬೇಹುಗಾರಿಕಾ ಬಂಡವಾಳಶಾಹಿಗಳು ಪ್ರಪಂಚದ ಅತ್ಯಂತ ಶಕ್ತಿಶಾಲಿ ಕಂಪ್ಯೂಟರ್ ಜಾಲವನ್ನು , ಅಂಕಿ ಅಂಶಗಳ ಕೇಂದ್ರಗಳನ್ನು , ದೊಡ್ಡ ಸಂಖ್ಯೆಯ ಸರ್ವರ್ ಗಳನ್ನು , ಸಮುದ್ರದಾಳದ ಸಂವಹನ ಕೇಬಲ್ ಗಳನ್ನೂ , ಅತ್ಯಂತ ಅಭಿವೃದ್ಧಿ ಹೊಂದಿದ ಮೈಕ್ರೋಚಿಪ್ ಅನ್ನು , ಅಗಾಧ ಸಂಖ್ಯೆಯ ಸಂಶೋಧಕರ ಸೈನ್ಯವನ್ನು  ಪ್ರಪಂಚದ ಎಲ್ಲ ಮೂಲೆಗಳಿಂದ ಹುಡುಕಿ ಸಿದ್ಧಮಾಡಿ , ಈ ಒಟ್ಟು ಮಾಡಿದ ಅಂಕಿಅಂಶಗಳನ್ನು ಹೇಗೆ ಉಪಯುಕ್ತ ಮಾಹಿತಿಯನ್ನಾಗಿ  ಮಾಡಬಹುದು ಎಂದು ಅನ್ವೇಷಿಸುತ್ತಿದ್ದಾರೆ .

ಗೂಗಲ್ ಮುಂಚೂಣಿಯಲ್ಲಿರುವ ಈ ಸ್ಪರ್ಧೆಯಲ್ಲಿ , ಪ್ರಮುಖ ಬೇಹುಗಾರಿಕಾ  ಬಂಡವಾಳಶಾಹಿಗಳು ನಿರ್ಧಿಷ್ಟ ಪರಿಣಿತಿಯಿರುವ, ಅಂಕಿ ಅಂಶ ಸಂಶೋಧಕರು , ಪ್ರಾಣಿ ನಡಾವಳಿ  ಸಂಶೋಧಕರನ್ನು ತಮ್ಮ ಸಂಸ್ಥೆಗಳಿಗೆ ಉದ್ಯೋಗಿಗಳನ್ನಾಗಿಸಿಕೊಳ್ಳಲು , ಸಣ್ಣ ಪುಟ್ಟ ಸಂಶೋಧನಾ ಸಂಸ್ಥೆಗಳನ್ನು, ವಿಶ್ವವಿದ್ಯಾನಿಲಯಗಳನ್ನು , ಶಾಲೆಗಳನ್ನು , ಮುನ್ಸಿಪಾಲಿಟಿಗಳನ್ನ , ಸಣ್ಣ ಮತ್ತು ಬಡ ರಾಷ್ಟ್ರಗಳ ಸಂಶೋಧಕರನ್ನು  ಮೂಲೆಗುಂಪಾಗಿಸುತ್ತಿವೆ . ೨೦೧೬ನೇ ಇಸವಿಯಲ್ಲಿ, ಅಮೇರಿಕಾದ  ೫೭ ಪ್ರತಿಶತ ಕಂಪ್ಯೂಟರ್  phd ವಿದ್ಯಾರ್ಥಿಗಳು  ಈ ಸಂಸ್ಥೆಗಳಿಗೆ ಸೇರಿಕೊಂಡಿದ್ದಾರೆ , ಕೇವಲ ೧೧ ಪ್ರತಿಶತ ವಿದ್ಯಾರ್ಥಿಗಳು ಅಕಾಡೆಮಿಕ್ ವೃತ್ತಿಗೆ ಸೇರಿಕೊಂಡಿದ್ದಾರೆ . ಇದು ಕೇವಲ ಅಮೇರಿಕಾ ದ  ಸಮಸ್ಯೆಯಲ್ಲ, ಬ್ರಿಟನ್ ನ್ನ ವಿಶ್ವವಿದ್ಯಾನಿಲಯಗಳಲ್ಲಿ "ಕಾಣೆಯಾಗಿರುವ " ಅಂಕಿ ಅಂಶ ವಿಜ್ಞಾನಿಗಳನ್ನು ಹುಡುಕುತ್ತಿದ್ದಾರೆ . ಒಬ್ಬ ಕೆನಡಾದ ವಿಜ್ಞಾನಿ "ಅಧಿಕಾರ , ಪರಿಣಿತಿ , ಅಂಕಿ ಅಂಶ ಎಲ್ಲವೂ ಕೆಲವೇ ಕೆಲವು ಸಂಸ್ಥೆಗಳಲ್ಲಿ ಸೇರಿಕೊಂಡಿದೆ" ಎಂದು ಗೊಣಗಾಡುತ್ತಾನೆ !



ಮನುಷ್ಯನ ಇತಿಹಾಸದಲ್ಲೇ ಅತ್ಯಂತ ಸುಲಭವಾಗಿ ಲಾಭ ಮಾಡಬಹುದಾದ , ಅಂತರ್ಜಾಲದ ಮೂಲಕ ಜಾಹೀರಾತು ನೀಡುವ , ಬಳಕೆದಾರ ಆಯ್ಕೆ ಮಾಡಿಕೊಳ್ಳಬಹುದಾದ ವಸ್ತುಗಳ ಜಾಹೀರಾತು ಲಿಂಕ್ ಅಂದಾಜುಮಾಡುವ , ವ್ಯಾಪಾರವನ್ನು ಗೂಗಲ್ ಮೊದಲ ಬಾರಿ ಶುರು ಮಾಡಿತು . ೨೦೦೦ನೇ ಇಸವಿ ಯ ಮತ್ತು, ಈ ಹೊಸ ಅರ್ಥ ವ್ಯವಸ್ಥೆಯ ತರ್ಕ ಹೊರ ಹೊಮ್ಮುತ್ತಿದ್ದ ಸಮಯವಾದ ೨೦೦೪ ರ ಮಧ್ಯೆ ಆ ಕಂಪನಿಯ ಲಾಭ ೩೫೯೦ ಪಟ್ಟು ಹೆಚ್ಚಾಯಿತು , ಅದೇ ವರ್ಷ ಆ ಕಂಪನಿ ಸಾರ್ವಜನಿಕ ಅಸ್ತಿತ್ವಕ್ಕೂ ಸಹ ಬಂತು . ಈ ಆಶ್ಚರ್ಯವನ್ನುಂಟುಮಾಡುವ ಹಣದ ಮೊತ್ತ "ಬೇಹುಗಾರಿಕಾ ಲೋಕದ ಡಿವಿಡೆಂಟ್ (ಲಾಭಾಂಶ) " ಮಾತ್ರ . ಶೀಘ್ರವೇ ಸಣ್ಣ ಸಣ್ಣ ಕಂಪನಿಗಳಿಗೆ ಹಣ ಹೂಡಿಕೆ ಮಾಡಿ , ಸಾಫ್ಟ್ವೇರ್ ಡೆವೆಲಪರ್ ಗಳನ್ನು ಉದ್ಯೋಗಿಗಳನ್ನಾಗಿಸಿ ತನ್ನ ಸಂಸ್ಥೆಯ ಗುರಿಯನ್ನು ಬೇಹುಗಾರಿಕಾ ಬಂಡವಾಳು ಶಾಹಿ ವ್ಯವಸ್ಥೆಯಕಡೆ ತಿರುಗಿಸಿತು . ಮನುಷ್ಯನ ಭವಿಷ್ಯವನ್ನು ಮಾರಿ ಅತಿ ಕಡಿಮೆ ಸಮಯದಲ್ಲಿ ಅಳತೆಮೀರಿದ ಲಾಭ ಮಾಡುವ ಈ ದಾರಿ ಹಿಡಿದು ನಂತರ ಫೇಸ್ ಬುಕ್ ಬಂತು , ನಂತರ ತಂತ್ರಜ್ಞಾನ ವಲಯದ ಮೂಲಕ ಉಳಿದ ಎಲ್ಲ ಆರ್ಥಿಕತೆ , ಮತ್ತು ವಿಮಾ ವಲಯ , ಸರಕು ವ್ಯಾಪಾರ , ಆರೋಗ್ಯ ವಲಯ , ಹಣಕಾಸು , ಮನರಂಜನೆ ಮತ್ತು "smart" ಎಂದು ಶುರುವಾಗುವ , ಅಥವಾ "ವಯಕ್ತೀಕರಿಸಿದ " ಎಂಬ ಪದಗಳಿರುವ ಎಲ್ಲ ಉದ್ಯಮಕ್ಕೂ ಹರಡಿಕೊಂಡಿತು

೨೦ನೇ ಶತಮಾನದಲ್ಲಿ ಸಮೂಹ ಉತ್ಪಾದನಾ ಅರ್ಥವ್ಯವಸ್ಥೆಯ ರೂವಾರಿಯಾಗಿದ್ದ ಫೋರ್ಡ್ ಕೂಡ , ಈ ಬೇಹುಗಾರಿಕಾ ಲಾಭಾಂಶದ ಹಿಂದೆ ಹೋಗಿ , ತನ್ನ ಕಡಿಮೆಯಾದ ಕಾರು ಮಾರಾಟದ ಸಂಖ್ಯೆಯನ್ನು ಹೆಚ್ಚಿಸಲು "transportation operating system” ಅನ್ನು ಹೊರತರುತ್ತಿದೆ . ಒಬ್ಬ ವಿಶ್ಲೇಷಕ ಹೇಳಿದ ಹಾಗೆ, ಫೋರ್ಡ್ " ಅಂಕಿ ಅಂಶಗಳನ್ನು ಬಳಸಿ ಅಸಾಧ್ಯ ಹಣ ಗಳಿಸಬಹುದು . ಅದಕ್ಕಾಗಿ ಅವರಿಗೆ ತಂತ್ರಜ್ಞರು ಬೇಡ , ಕಾರ್ಖಾನೆ ಬೇಡ ಅಥವಾ ಡೀಲರ್ ಗಳು ಸಹ ಬೇಡ . ಬರೀ ಲಾಭ ಮಾತ್ರ ಅವರಿಗಾಗಿ ಕಾದಿದೆ"

ಬೇಹುಗಾರಿಕಾ ಬಂಡವಾಳ ವ್ಯವಸ್ಥೆಯ ಆರ್ಥಿಕ ಯಶಸ್ಸು , ಎಷ್ಟರ ಮಟ್ಟಿಗೆ ಖಾತ್ರಿಯಾಗಿ ಭವಿಷ್ಯವನ್ನು ಅಂದಾಜಿಸುತ್ತದೆ ಎನ್ನುವುದರ ಮೇಲೆ ಅವಲಂಬಿತವಾಗಿದೆ . ಮೊದ ಮೊದಲು ಈ ಯಾಂತ್ರಿಕ ಬುದ್ಧಿ ಶಕ್ತಿಗೆ ಅಪಾರ ಪ್ರಮಾಣದ ಅಂಕಿ ಅಂಶಗಳು ಅಗತ್ಯವಾಗಿತ್ತು . ಆದರೆ ತದನಂತರ ಅಂಕಿಅಂಶಗಳ ಪ್ರಮಾಣದಷ್ಟೇ ಮುಖ್ಯವಾಗಿ , ವಿಭಿನ್ನ ರೀತಿಯ ಅಂಕಿ ಅಂಶಗಳು ಕೂಡ ಅತ್ಯುತ್ತಮ ಸಾಫ್ಟ್ ವೇರಿಗೆ ಬೇಕು ಎಂದು ಅರಿವಾಯಿತು . ಈ ಹೊಸ ಹೊಳಹಿನಿಂದ ಶುರುವಾಗಿದ್ದೇ "mobile ಕ್ರಾಂತಿ ". ಬಳಕೆದಾರರು ತಮ್ಮ ಜತೆ ಕ್ಯಾಮೆರಾ , ಕಂಪ್ಯೂಟರ್ಸ್ , ಮೈಕ್ರೋಫೋನ್ ಎಲ್ಲವನ್ನು ತಮ್ಮ ಮೊಬೈಲ್ ನೊಳಗೆ ತೆಗೆದುಕೊಂಡು ಹೋಗುವ ಹಾಗೆ ಮಾಡಲಾಯಿತು . ಈ ಅತ್ಯಂತ ಹೆಚ್ಚು ಸ್ಪರ್ಧೆಯಿರುವ ಕ್ಷೇತ್ರದಲ್ಲಿ , ಅವರಿಗೆ ನೀವು ನಿಮ್ಮ ಮನೆಗಳಲ್ಲಿ ಗೋಡೆಗಳ ಮಧ್ಯೆ ಏನು ಮಾತನಾಡುತ್ತಿದ್ದೀರಿ ಎಂದು ತಿಳಿಯಬೇಕಿತ್ತು . ನಿಮ್ಮ ಕಾರ್ ಯಾವುದು , ನಿಮ್ಮ ಆರೋಗ್ಯದ ಸ್ಥಿತಿಯೇನು, ನೀವು ನೋಡುವ ಮನರಂಜನಾ ಕಾರ್ಯಕ್ರಮಗಳು ; ನಿಮ್ಮ ವಾಸ ಸ್ಥಳ , ನೀವು ಸಂಚರಿಸುವ ರಸ್ತೆ , ಹಾದು ಹೋಗುವ ಕಟ್ಟಡಗಳು ಮತ್ತು ನಿಮ್ಮ ನಗರದ ಜನರೆಲ್ಲರ ನಡಾವಳಿ ಎಲ್ಲವೂ ಬೇಕು . ಅವರಿಗೆ ನಿಮ್ಮ ಧ್ವನಿ ಬೇಕು , ನೀವು ಏನು ತಿನ್ನುತ್ತೀರಿ , ಏನು ಖರೀದಿಸುತ್ತೀರಿ ಲ ನಿಮ್ಮ ಮಕ್ಕಳ ಆಟದ ಸಮಯ , ಅವರ ಶಾಲೆಯ ವಿವರ ; ನಿಮ್ಮ ಮೆದುಳಿನ ತರಂಗಗಳು ಮತ್ತು ನಿಮ್ಮ ರಕ್ತದ ಹರಿವು ಎಲ್ಲವೂ ಬೇಕು. ಯಾವುದೂ ಇದರಿಂದ ಹೊರತಾಗಿಲ್ಲ

ನಮ್ಮ ಬಗ್ಗೆ ಹೊಂದಿರುವ ಅನಿಯಂತ್ರಿತ ಮಾಹಿತಿಯಿಂದ ಅನಿಯಂತ್ರಿತ ಅಧಿಕಾರ ನಮ್ಮ ಮೇಲೆ ಅವರಿಗೆ ಸಿಗುತ್ತದೆ , ಮತ್ತು ಈ ಮಾಹಿತಿ ಅಸಮಾನತೆಯಿಂದ ನಾವು ಮಾಡ ಬಹುದಾದ ವಿಷಯಗಳ ಮತ್ತು ನಮಗೆ ಅವರು ಮಾಡಬಹುದಾದ ವಿಷಯಗಳ ನಡುವಿನ ಅಂತರ ಹೆಚ್ಚಾಗುತ್ತದೆ . ಮಾಹಿತಿ ವಿಜ್ಞಾನಿಗಳು ಇದನ್ನು ಪರಿವೀಕ್ಷಣೆಯಿಂದ  ವರ್ತನೆಯ ಕಡೆಗೆ ಸ್ಥಿತ್ಯಂತರ ಎಂದು ಕರೆಯುತ್ತಾರೆ ,  ಈ ಸ್ಥಿತಿಯಲ್ಲಿ , ಅಪಾರ ಪ್ರಮಾಣದಲ್ಲಿ ಸಂಗ್ರಹವಾಗಿರುವ ನಮ್ಮ ಬಗೆಗಿನ ಅಂಕಿ ಅಂಶಗಳು , ನಮ್ಮನ್ನು ರಿಮೋಟ್ ಕಂಟ್ರೋಲಿನ ಹಾಗೆ ನಿಯಂತ್ರಿಸಲು  ಸಾಧ್ಯವಾಗುವ ಸ್ಥಿತಿ ಉಂಟುಮಾಡುತ್ತದೆ . ಈಗ ಜನರು ಇಂತಹ ರಿಮೋಟ್ ಕಂಟ್ರೋಲ್ ನ ಹಿಡಿತಕ್ಕೆ ಸಿಕ್ಕಿದ್ದಾರೆ , ಹೇಗೆಂದರೆ ನಮ್ಮ ಭವಿಷ್ಯದ ನಡೆಯನ್ನು ಕರಾರುವಕ್ಕಾಗಿ ಅಂದಾಜು ಮಾಡಲು ಸಾಧ್ಯವಾಗಬೇಕೆಂದರೆ , ನಮ್ಮ ದೈನಂದಿನ ನಡಾವಳಿಯನ್ನು ಅವರ  ವಾಣಿಜ್ಯದ ಅಗತ್ಯಕ್ಕೆ ತಕ್ಕಂತೆ ನಿರ್ದೇಶಿಸುವುದು ಅತ್ಯಂತ ಪರಿಣಾಮಕಾರಿ ವಿಧಾನ ಎಂದು ಅರಿತು ಕೊಂಡಿದ್ದಾರೆ .  ಮೂರನೇ ಅನಿವಾರ್ಯತೆಯಾದ "economies of action" ನ ಮೇಲೆ ಅತ್ಯಂತ ತೀವ್ರವಾದ ಪ್ರಯೋಗಗಳು ಜಾರಿಯಲ್ಲಿವೆ. "ನಾವು ಸಂಗೀತವನ್ನು ಹೇಗೆ ಬರೆಯಬಹುದು ಎಂದು ಸಂಶೋಧಿಸುತ್ತಿದ್ದೇವೆ " ಎನ್ನುತ್ತಾರೆ ಒಬ್ಬ ವಿಜ್ಞಾನಿ " ನಂತರ ನಮ್ಮ ಸಂಗೀತಕ್ಕೆ ಅವರು ಕುಣಿಯುವ ಹಾಗೆ  ಮಾಡುತ್ತೇವೆ "

"ಎಲ್ಲರನ್ನು ಕುಣಿಸುವ " ಈ ಹೊಸ ಶಕ್ತಿ ಬಂದಮೇಲೆ ಯೋಧರನ್ನು ಬಳಸಿ ಭಯ ಉಂಟುಮಾಡುವುದಾಗಲಿ ಕೊಲೆ ಮಾಡುವುದಾಗಲಿ ಅವಶ್ಯಕತೆ ಇಲ್ಲ, ಬದಲಾಗಿ ಅದು ಒಂದು ಕಾಫಿ ಕಪ್ ನ ಜತೆ ಬರುತ್ತದೆ , ಗನ್ ನ ಜತೆಯಲ್ಲ . ಈ ಹೊಸಬಗೆಯ ನಿಯಂತ್ರಕ ಶಕ್ತಿ ,  ಇಂದು ಸರ್ವಾಂತರ್ಯಾಮಿ ಡಿಜಿಟಲ್ ಉಪಕರಣಗಳ ಮೂಲಕ , ಅಭಿಪ್ರಾಯಗಳನ್ನು ರೂಪಿಸುವುದರ ಮೂಲಕ , ಮಾನಸಿಕವಾಗಿ ಗುರಿಯಾಗಿಸಿಕೊಂಡು ,  ತಂತಾನೇ ಸ್ವಾಭಾವಿಕ ಆಯ್ಕೆಯಾಗಿ ,  ಪರಸ್ಪರ ಹೋಲಿಕೆ ಮಾಡಿಕೊಂಡು ಸಂತೋಷ - ದುಃಖಕ್ಕೆ ಈಡಾಗುವ ಮತ್ತು ಪ್ರತಿಫಲಗಳು ಮತ್ತು ಶಿಕ್ಷೆಗಳನ್ನು ನೀಡುತ್ತಾ , ಇವೆಲ್ಲದರ ಮೂಲಕ ತಮ್ಮ ಅಗತ್ಯಕ್ಕೆ ತಕ್ಕಂತೆ ಭಾವನೆಗಳನ್ನು ತಿರುಗಿಸಿಕೊಂಡು , ಮನುಷ್ಯನ ನಡಾವಳಿಗಳನ್ನು ತಮ್ಮ ಲಾಭಕ್ಕಾಗಿ ತಿರುಗಿಸಿಕೊಂಡು , ತಮ್ಮ ಬಳಕೆ ದಾರರನ್ನು ಸದಾ ಕಾಲ ಅಜ್ಞಾನದಲ್ಲಿ ಇಡಲು ಪ್ರಯತ್ನಿಸುವುದು

ಫೇಸ್ಬುಕ್ ನ ಈ ಭವಿಷ್ಯ ಸೂಚಕ ಜ್ಞಾನ , ಜನಾಭಿಪ್ರಾಯವನ್ನು ನಿರೂಪಿಸುವ ಶಕ್ತಿಯಾದದ್ದನ್ನು ಫೇಸ್ಬುಕ್ ೨೦೧೨ ಮತ್ತು ೨೦೧೪ ರಲ್ಲಿ ಪ್ರಕಟಿಸಿದ ಸಾಂಕ್ರಾಮಿಕ ಪ್ರಯೋಗ ದ ವರದಿಯಲ್ಲಿ , ತನ್ನ ಬಳಕೆದಾರರಿಗೆ ಪ್ರಜ್ಞಾಪೂರ್ವಕವಾಗಿ ನೀಡಿದ ಸೂಚನೆಗಳು ಹೇಗೆ ಸಾಮಾಜಿಕ ಅಭಿಪ್ರಾಯಗಳನ್ನು ಬದಲಾಯಿಸಿತು ಮತ್ತು ಮಧ್ಯಂತರ ಚುನಾವಣೆಯ ಮತದಾನದ ಮೇಲೆ ಪರಿಣಾಮ ಬೀರಿತು ಮತ್ತು ಆನಂತರ ಹೇಗೆ ಜನರನ್ನು ದುಃಖಿತರನ್ನಾಗಿ ಮತ್ತು ಸಂತೋಷದಿಂದಿರುವಂತೆ ಮಾಡಿತು ಎನ್ನುವುದು ಧಾಖಲಾಗಿದೆ. ಫೇಸ್ ಬುಕ್ ನ ಸಂಶೋಧಕರು ಈ ಪ್ರಯೋಗದ ಯಶಸ್ಸನ್ನು ಈ ಎರಡು ಕಾರಣ ನೀಡಿ ಸಂಭ್ರಮಿಸಿದರು , ಮೊದಲನೆಯಾದಾಗ , ವಾಸ್ತವ ಜಗತ್ತಿನ ಅಭಿಪ್ರಾಯಗಳನ್ನು ಪ್ರಜ್ಞಾಪೂರ್ವಕ ಸುಳಿವುಗಳನ್ನು ನೀಡುವುದರ ಮೂಲಕ ಬದಲಾಯಿಸಿದ್ದು  ಮತ್ತು ಇದನ್ನು ಬಳಕೆದಾರರ ಅರಿವಿಗೆ ಬಾರದ ಹಾಗೆ ಮಾಡಲಾಗಿದ್ದು .

೨೦೧೬ ನೇ ಇಸವಿಯಲ್ಲಿ ಗೂಗಲ್ ಉತ್ಪ್ರೇಕ್ಷಿತ ವಾಸ್ತವದಲ್ಲಿ ನಡೆಯುವ ಪೋಕೆಮೊನ್ ಗೋ ಅನ್ನು ಬಳಸಿ ನಿಜ ಲೋಕದ ರಸ್ತೆಗಳಲ್ಲಿ "economies of action" ಅನ್ನು ಪ್ರಯೋಗಿಸಿತು . ಆಟದ ಬಳಕೆದಾರರಿಗೆ ತಾವು ನಿಜವಾದ ಆಟವೊಂದರ ಒತ್ತೆಯಾಳಾಗಿದ್ದೇವೆ ಮತ್ತು ನಮ್ಮ ನಡಾವಳಿಯನ್ನು ತಮ್ಮ ಲಾಭಕ್ಕೋಸ್ಕರ ಬದಲಾಯಿಸುತ್ತಿದ್ದರೆ , ಮತ್ತು  ಕಲ್ಪಿತ ಪ್ರಾಣಿಯೊಂದನ್ನು ಹಿಡಿಯುವ ಆಟದಲ್ಲಿ ಪ್ರತಿಫಲ ಮತ್ತು ಶಿಕ್ಷೆಗಳಾಗಿ ಮ್ಯಾಕ್ ಡೊನಾಲ್ಡ್ , ಸ್ಟಾರ್ ಬಕ್ಸ್  ಮತ್ತು ಪಿಜ್ಜಾ

ಅಂಗಡಿಗಳಲ್ಲಿ ಜನ ಒಟ್ಟುಗೂಡು ಮಾಡುವಂತೆ ಮಾಡಿ , ಹಾಗೆ ಒಟ್ಟು ಗೂಡಿಸಿದ್ದಕ್ಕೆ ಆ ಅಂಗಡಿಗಳಿಂದ ಹಣ ಪಾವತಿಯಾಗಿತ್ತು . ಅಂತರ್ಜಾಲವೊಂದರಲ್ಲಿ ಲಿಂಕ್ ಕ್ಲಿಕ್ ಮಾಡುವು ಹಾಗೆಯೇ , ಈ ಪ್ರಯೋಗದಲ್ಲಿ ಜನ ಒಂದು ಅಂಗಡಿಯಲ್ಲಿ ಒಟ್ಟು ಗೂಡುವ ಹಾಗೆ  ಮಾಡಲಾಗಿತ್ತು

೨೦೧೭ ರಲ್ಲಿ , ಸುದ್ದಿ ಸೋರಿಕೆಯಾದ ಫೇಸ್ ಬುಕ್ ನ ದಾಖಲೆಯೊಂದು ಆಸ್ಟ್ರೇಲಿಯನ್ ಸಂಸ್ಥೆಯೊಂದಕ್ಕೆ ಸಿಕ್ಕಿ , ಹೇಗೆ ತನ್ನ ಬಳಿ ಇದ್ದ ಬಳಕೆದಾರರ  ಮಾಹಿತಿ ಬಳಸಿ ಅವರ ನಡಾವಳಿಯನ್ನು ಬದಲಾಯಿಸಲು ಪ್ರಯೋಗ ನಡೆಸಿತ್ತು ಎಂದು ಹೊರಬಂದಿತ್ತು . ಈ ಪ್ರಯೋಗದ ಗುರಿ ೬ ಕೋಟಿ ಆಸ್ಟ್ರೇಲಿಯಾ ಮತ್ತು ನ್ಯೂ ಝೀ ಲ್ಯಾಂಡ್ ಯುವ ಜನತೆ . "ಅವರ ಪೋಸ್ಟ್ ಗಳನ್ನು , ಫೋಟೋಗಳನ್ನು , ಮಾತುಕತೆಗಳನ್ನು ಮತ್ತು ಅಂತರ್ಜಾಲದ ಚಟುವಟಿಕೆಗಳನ್ನು " ಬಳಸಿ "ಫೇಸ್ಬುಕ್ ಯಾವಾಗ ಆ ಯುವಕರು "ಒತ್ತಡ"ದಲಿದ್ದಾ ರೆ " ಸಂತೋಷವಾಗಿದ್ದಾ ರೆ , ಆತಂಕಕ್ಕೀಡಾಗಿದ್ದರೆ , ಸೋತು ಹೋಗಿದ್ದಾರೆ , ಗೆಲುವಾಗಿದ್ದರೆ ಎನ್ನುವುದನ್ನು ತಿಳಿದುಕೊಳ್ಳಬಹುದು . ಇಷ್ಟು ವಿವರವಾದ ಮಾಹಿತಿಗಳನ್ನು ಬಳಸಿ , ಆ ಯುವಕರಿಗೆ ಯಾವಾಗ ಆತ್ಮವಿಶ್ವಾಸದ ಅಗತ್ಯ ಇದೆ ಎಂದು ನಿರ್ಧರಿಸಬಹುದು ಮತ್ತು ಯಾವಾಗ ಪ್ರಜ್ಞಾಪೂರ್ವಕ ಸೂಚನೆಗಳನ್ನು ನೀಡಿ ಅವರ ಭಾವನೆಗಳನ್ನು ನಿಯಂತ್ರಿಸಬಹುದು  ಎಂದು ತಿಳಿದು ಕೊಳ್ಳಬಹುದಿತ್ತು . ಈ ಮಾಹಿತಿ ಬಳಸಿ ಅವರ ಭಾವನೆಗಳಿಗೆ ತಕ್ಕ ಹಾಗೆ ಜಾಹಿರಾತುಗಳನ್ನು ತೋರಿಸಿದರೆ , ಅವರು ಖಾತರಿಯಾಗಿ ಆ ಪದಾರ್ಥ ಕೊಳ್ಳುವ ಸಾಧ್ಯತೆ ಹೆಚ್ಚಾಗಿಸಬಹುದಿತ್ತು

ಫೇಸ್ಬುಕ್  ಈ ಎಲ್ಲ ನಡವಳಿಕೆಗಳು ತನ್ನದಲ್ಲ ಎಂದು ನಿರಾಕರಿಸಿತು . ಆದರೆ ಆ ಸಂಸ್ಥೆಯ ಮಾಜಿ ಮ್ಯಾನೇಜರ್ ಒಬ್ಬರು ಇದನ್ನು "ಹಸಿ ಹಸಿ ಸುಳ್ಳು " ಎಂದು ಆಪಾದಿಸಿದ್ದರು . ಯಾವುದೇ ಬಗೆಯ ಪಾರದರ್ಶಕರ್ತೆ ಇಲ್ಲದೆ , ಆಂತರಿಕ ಪ್ರಜಾಪ್ರಭುತ್ವಗಳಿಲ್ಲದೆ, ಈ ಕಂಪೆನಿಗಳಲ್ಲಿ ಮಾಹಿತಿ ಅಸಮಾನತೆ  ತಾಂಡವವಾಡುತ್ತಿದೆ . ಇದು ಅವರಿಗೆ ಗೊತ್ತು . ಯಾರಿಗೆ ಗೊತ್ತಿರಬೇಕು ಎಂದು ಅವರೇ ನಿರ್ಧರಿಸುತ್ತಾರೆ . ಯಾರು ನಿರ್ಧರಿಸಬೇಕು ಎನ್ನುವುದನ್ನೂ ಅವರೇ ನಿರ್ಧರಿಸುತ್ತಾರೆ

ಸಾರ್ವಜನಿಕರ ಬಳಿ ಇರುವ ಈ ಮಾಹಿತಿಯ ಕೊರತೆಯ ಪರಿಣಾಮ  , ಬೇಹುಗಾರಿಕಾ   ಬಂಡವಾಳ ಶಾಹಿಗಳ ಸಾಮೂಹಿಕ ಸಂವಹನದ  ಮೇಲಿನ ಹಿಡಿತ ದಿಂದ ಮತ್ತಷ್ಟು ಉಲ್ಬಣಗೊಂಡಿದೆ . ಉದಾಹರಣೆಗೆ , ೨೦೧೯ನೇ ಇಸವಿ ಏಪ್ರಿಲ್ ೩೦ರಂದು ಮಾರ್ಕ್ zuckerberg ಅವನ ಸಂಸ್ಥೆಯ ವಾರ್ಷಿಕ ಸಾಫ್ಟ್ವೇರ್ ಡೆವೆಲಪರ್ ಸಮ್ಮೇಳನದಲ್ಲಿ "ಭವಿಷ್ಯ ನಿಂತಿರುವುದು ಖಾಸಗಿತನದ  ಮೇಲೆ " ಎಂದು ಘೋಷಿಸಿದ. ಕೆಲವು ವಾರಗಳ ನಂತರ , ಫೇಸ್ಬುಕ್ ಮೇಲೆ  ತನ್ನ ಖಾಸಗೀ ಬದುಕಿನ ಗೌಪ್ಯತೆಗೆ ಧಕ್ಕೆಯಾಗಿದೆ ಎಂದು ಮೊಕದ್ದಮೆ ಹೂಡಿದ್ದ ಬಳಕೆದಾರನೊಬ್ಬ , ಫೇಸ್ಬುಕ್ ಬಳಕೆ ಮಾಡುವುದೇ ಖಾಸಗೀತನ ಎನ್ನುವುದು "ನ್ಯಾಯವಾಗಿ " ಬಳಕೆದಾರನ ಹಕ್ಕು ಎನ್ನುವುದನ್ನು ನಿರಾಕರಿಸುತ್ತದೆ , ಎಂದು ತನ್ನ ಆಪಾದನೆಯಲ್ಲಿ ವಾದ ಮಾಡಿದ್ದ . ೨೦೧೯ನೇ ಇಸವಿ ಮೇ ತಿಂಗಳಲ್ಲಿ , ಗೂಗಲ್ ಸಂಸ್ಥೆಯ ಮುಖ್ಯಸ್ಥ ಸುಂದರ್ ಪಿಚ್ಚಯ್ ತನ್ನ ಟೈಮ್ಸ್ ಪತ್ರಿಕೆಯ ಲೇಖನದಲ್ಲಿ   ತನ್ನ ಸಂಸ್ಥೆಗೆ "ಖಾಸಗೀತನ ಎನ್ನುವುದು ವಿಲಾಸದ ವಸ್ತುವಲ್ಲ " ಎನ್ನುವ ಹೇಳಿಕೆಗೆ ಬದ್ಧವಾಗಿದೆ ಎಂದು ಬರೆದಿದ್ದ . ಐದು ತಿಂಗಳ ನಂತರ ಗೂಗಲ್ ಸಂಸ್ಥೆಯ ಗುತ್ತಿಗೆದಾದರರು ಅಟ್ಲಾಂಟ ಪಾರ್ಕಿನಲ್ಲಿದ್ದ ನಿರಾಶ್ರಿತ ಕಪ್ಪು ಜನಾಂಗದವರ ಮುಖ ಚಹರೆ ವಿವರಗಳನ್ನು ಸಂಗ್ರಹಿಸಿ ಪ್ರತಿಯಾಗಿ ೫ ಡಾಲರ್ ಉಡುಗೊರೆ ನೀಡುತ್ತಿದ್ದುದು ವರದಿಯಾಗಿತ್ತು

೨೦೧೮ರಲ್ಲಿ ಸೋರಿಕೆಯಾದ ಮತ್ತೊಂದು ದಾಖಲೆಯ ಪ್ರಕಾರ ಫೇಸ್ಬುಕ್ ತನ್ನ ನಡಾವಳಿಗಳನ್ನು ನಿರಾಕರಿಸುವುದನ್ನು ಮತ್ತಷ್ಟು ಅನುಮಾನಾಸ್ಪದವಾಗಿಸುತ್ತದೆ . ಈ ಗೌಪ್ಯವಾದ ದಾಖಲೆಯು ಫೇಸ್ಬುಕ್ ಬಳಸುವ ಮಾಹಿತಿ ಸಂಶ್ಲೇಷಣಾ ವಿಧಾನ ಮತ್ತು "ಭವಿಷ್ಯದ ಸೂಚಕ"ಗಳ ಲೆಕ್ಕ ಹಾಕುವ ಮಾದರಿಗಳ ಬಗ್ಗೆ ಒಳ ನೋಟ ನೀಡುತ್ತದೆ . ಈ ಮಾಹಿತಿ ತಂತ್ರಾಂಶಗಳು "ಪ್ರತಿ ದಿವಸ ಟ್ರಿಲಿಯನ್ ಗಟ್ಟಲೆ ಅಂಕಿ ಅಂಶ ಸಂಗ್ರಹಿಸುವ ಬಿಂದುಗಳನ್ನು ಬಳಕೆದಾರರ ಉಪಕರಣಗಳಿಗೆ ಸೇರಿಸಿ " ನಂತರ "ಆ ಮಾಹಿತಿಗಳನ್ನು ಆ ಕ್ಷಣವೇ ಸಂಶ್ಲೇಶಿಸಿ ಭವಿಷ್ಯದ ಮುನ್ಸೂಚಕಗಳನ್ನು " ಉತ್ಪಾದಿಸಲು ಬಳಸುತ್ತಾರೆ. ಫೇಸ್ಬುಕ್ ನ ಪ್ರಕಾರ ಈ ಮುನ್ಸೂಚಕಗಳನ್ನು ಉತ್ಪಾದಿಸುವ ವ್ಯವಸ್ಥೆ "ಪ್ರತಿ ಕ್ಷಣ ೬೦ ಲಕ್ಷ ಮುನ್ಸೂಚಕಗಳನ್ನು ಸೃಷ್ಟಿಸುತ್ತದೆ " ಆದರೆ ಇದು ಯಾರಿಗಾಗಿ ಮಾಡುತ್ತಾರೆ ?

ಈ ವರದಿಯಲ್ಲಿ , ಈ  ಅಸಾಮಾನ್ಯ ಸಾಮರ್ಥ್ಯ ವನ್ನು ಸಂಪೂರ್ಣವಾಗಿ ತನ್ನ ಕಾರ್ಪೊರೇಟ್ ಸಂಸ್ಥೆಗಳ "ಮುಖ್ಯ ವ್ಯಾವಹಾರಿಕ ಸ್ಪರ್ಧೆಗಳಿಗೆ " ಅನುಕೂಲವಾಗುವ ಹಾಗೆ ಅಂತರ್ಜಾಲ ತಾಣಗಳ ವಿಳಾಸದ ಅಂದಾಜಿಗೆ , ವಯಕ್ತಿಕ ಮಟ್ಟದ ಜಾಹಿರಾತುಗಳ ಆಯ್ಕೆಗೆ , ಮತ್ತು ಬಳಕೆದಾರರ ಅಭಿಪ್ರಾಯಗಳನ್ನು ಬದಲಾಯಿಸುವ ಕಡೆಗೆ , ಬಳಸಲಾಗುವುದು ಎಂದು ದಾಖಲಾಗಿದೆ . ಉದಾಹರಣೆಗೆ ಫೇಸ್ ಬುಕ್ ನ ಒಂದು ಸೇವೆಯ ಹೆಸರು "ಬಳಕೆದಾರರ ನಿಷ್ಠೆ ಸೂಚಕ " , ಮತ್ತು ಈ ಸೇವೆಯ ಪ್ರಕಾರ ಆ ಬಳಕೆದಾರ ಬ್ರಾಂಡ್ ಒಂದರ ಬಗೆಗಿನ ನಿಷ್ಠೆ ಬದಲಾಗುವಂತಿದ್ದರೆ ಅದನ್ನು ಮುಂಚೆಯೇ ಅಂದಾಜು ಮಾಡಿ , ಜಾಹೀರಾತುದಾರರಿಗೆ ತಿಳಿಸುತ್ತದೆ , ಮತ್ತು ಈ ಮಾಹಿತಿಯ ಸಹಾಯದಿಂದ ಆ ವ್ಯಕ್ತಿಯ ನಿಷ್ಠೆ ಮರಳಿ ಜಾಹಿರಾತುದಾರರ ಕಡೆಯೇ ವಾಲುವಂತೆ ಮಾಡಲು ಬೇಕಾದ ಕೊಡುಗೆಗಳನ್ನು , ಅಥವಾ ಸಂದೇಶಗಳನ್ನು ಬಳಕೆದಾರರಿಗೆ ತಲುಪಿಸಲಾಗುತ್ತದೆ.

ಅದೇ ವರ್ಷ ರಾಜಕೀಯ ವಿಶ್ಲೇಷಕ ಸಂಸ್ಥೆ ಕ್ಯಾಂಬ್ರಿಜ್ ಅನಾಲಿಟಿಕಾ ದ  ಮಾಜಿ ಉದ್ಯೋಗಿ , ಕ್ರಿಸ್ಟೋಫರ್ ವಿಯ್ಲಿ , ಒಂದು ಮಹತ್ತರ ಗುಟ್ಟು ರಟ್ಟು ಮಾಡಿದ.  "ನಾವು ಫೇಸ್ ಬುಕ್ ಅಂಕಿಅಂಶಗಳ ಸಹಾಯದಿಂದ ಕೋಟ್ಯಂತರ ಬಳಕೆದಾರರ ಮಾಹಿತಿ ಬಳಸಿ, ಅವರ ಬಗೆಗಿನ ಎಲ್ಲ ವಿಷಯಗಳನ್ನು ಬಳಸಿ ಅವರೊಳಗಿನ ಪೈಶಾಚಿಕ ಭಾವನೆಗಳನ್ನು ಹೊರ ಹಾಕುವ ವಿಧಾನಗಳ ರೂಪುರೇಷೆ ಸಿದ್ದ ಮಾಡುತ್ತಿದ್ದೆವು " . ಮಿಸ್ಟರ್ ವಿಯ್ಲಿ ಹೇಳುವ ಪ್ರಕಾರ ಇದು "ಮಾಹಿತಿ ಯುದ್ದ " ಮತ್ತು ಇಂತಹ ನಿಗೂಢವಾಗಿಯೇ ನಡೆಯುವ ಯುದ್ಧಗಳು ನಿಂತಿರುವುದು "ಮಾಹಿತಿ ಅಸಮಾನತೆ"ಯ  ಮೇಲೆ ಮತ್ತು ಅದು ನೀಡುವ ಅನಿಯಂತ್ರಿತ ಅಧಿಕಾರದ ಮೇಲೆ .  ಬಳಕೆದಾರರಿಗೆ ಮತ್ತು ಕಾನೂನು ನಿರ್ಮಿಸುವವರಿಗೆ ಗೊತ್ತಿರದ ಅಂಶ ಏನೆಂದರೆ , ಈ ಸಂಸ್ಥೆಗಳು ಬಳಕೆದಾರರ ಖಾಸಗೀ ಬದುಕಿನ ಮೇಲೆ ರಹಸ್ಯವಾಗಿ  ದಾಳಿ ಮಾಡಿ ಪ್ರತೀ ದಿವಸ ಕೋಟ್ಯಂತರ ಜನರ ಅಂಕಿಅಂಶಗಳನ್ನು ಸಂಗ್ರಹಿಸುತ್ತಿದ್ದಾರೆ ,ಎನ್ನುವುದು . ಕೇಂಬ್ರಿಜ್ ಅನಾಲಿಟಿಕದ ಮಹತ್ತರ ಸಾಧನೆಯೆಂದರೆ , ವ್ಯಾಪಾರಕ್ಕಾಗಿ ಕಲೆ ಹಾಕಿದ ಅಂಕಿ ಅಂಶಗಳನ್ನು ಬಳಸಿ ರಾಜಕೀಯಕ್ಕಾಗಿ ಬಳಸಿಕೊಂಡಿದ್ದು .

ಇನ್ನೊಂದು ರೀತಿ ಹೇಳಬೇಕೆಂದರೆ , ಕೇಂಬ್ರಿಜ್ ಅನಾಲಿಟಿಕ ಸಂಸ್ಥೆ ಒಂದು ಪರಾವಲಂಬಿ ಜೀವಿ , ಮತ್ತು ಬೇಹುಗಾರಿಕಾ ಬಂಡವಾಳಶಾಹಿ ವ್ಯವಸ್ಥೆ ಅದರ ಆತಿಥೇಯ .  ಈ ಬಗೆಯ ಮಾಹಿತಿ ಸಂಗ್ರಹದ ಮೇಲಿನ ಸ್ವಾಮ್ಯತೆಯಿಂದ , ಬೇಹುಗಾರಿಕಾ   ಬಂಡವಾಳಶಾಹಿ ವ್ಯವಸ್ಥೆ , ಇವರ ಗುರಿಯಾಗಿದ್ದ ಬಳಕೆದಾರರ ಅಂಕಿ ಅಂಶಗಳನ್ನು ಸುಲಭವಾಗಿ ಒದಗಿಸಿತ್ತು , ಮತ್ತು ಈ ವ್ಯವಸ್ಥೆಯ ವಯಕ್ತಿಕ ಮಟ್ಟದ ಗುರಿ ಮತ್ತು ಅಭಿಪ್ರಾಯಗಳನ್ನು ಬದಲಾಯಿಸುವ ತಂತ್ರ ಅವರ ಆಯುಧಗಳಾಗಿ ಬದಲಾಯಿತು . ಮತ್ತು ಬಳಕೆದಾರರ ಬಗೆಗಿನ ಮಾಹಿತಿಯ ಮೇಲೆ   ಬೇಹುಗಾರಿಕಾ

ಬಂಡವಾಳಶಾಹಿಗಳ  ಸಂಸ್ಥೆಗಳಿಗೆ ಇರದ ಯಾವುದೇ ಹೊಣೆಗಾರಿಕೆ ಮತ್ತು ಸೆಕ್ಷನ್ ೨೩೦ ರ ಪ್ರಕಾರ ದೊರಕಿದ್ದ ಸ್ವಾತಂತ್ರ್ಯದ ದುರ್ಬಳಕೆ ಮಾಡಿ , ಬಳಕೆದಾರರ ಒಳಗಿದ್ದ ಪೈಶಾಚಿಕ ಸ್ವಭಾವಗಳನ್ನು ಹೊರತರುವಲ್ಲಿ ಯಶಸ್ವಿಯಾದವು .

ಈ ಬಗೆಯ ಮಾಹಿತಿ ಅಸಮಾನತೆಯೊಂದೇ ಬಳಕೆದಾರರನ್ನು ಕೇಂಬ್ರಿಜ್ ಅನಾಲಿಟಿಕ ದಂತಹ ಸಂಸ್ಥೆಗಳು ಬಳಸಿಕೊಳ್ಳುವ ಹಾಗೆ ಮಾಡಿಲ್ಲ . ಇದಕ್ಕೂ ದೊಡ್ಡದಾದ ಮತ್ತು ಗಂಭೀರವಾದ ಸಮಸ್ಯೆಯೆಂದರೆ , ಈ ಬೇಹುಗಾರಿಕಾ ಬಂಡವಾಳಶಾಹಿಗಳು ಮಾಹಿತಿ ಅಸಮಾನತೆಯನ್ನೇ ನಮ್ಮ ಸಮಾಜದ ಹೊಸ ಬುನಾದಿಯನ್ನಾಗಿ ಮಾಡಿ, ಈ ಮಾಹಿತಿ ಯುದ್ಧಗಳನ್ನು ದಿನನಿತ್ಯದ ಬದುಕಿನಲ್ಲಿ ಸಹಜಗೊಳಿಸಿ, ನಾವು ನಮ್ಮ ದಿನನಿತ್ಯದ ಸಾಮೂಹಿಕ ಚಟುವಟಿಕೆಗಳಿಗೆ ಅವಲಂಬಿತವಾಗಿರುವ ವ್ಯವಸ್ಥೆಯನ್ನೇ ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಿವೆ . ಈ ಸಂಸ್ಥೆಗಳ ಬಳಿ ಮಾಹಿತಿಯಿದೆ , ಬೇಕಾದ ಯಂತ್ರಗಳಿವೆ , ರಹಸ್ಯಗಳಿವೆ ಮತ್ತು ಸುಳ್ಳುಗಳಿವೆ . ನಮ್ಮ ಖಾಸಗಿತನ ಅವರ ಬಳಿ ಇದೆ , ಮತ್ತು ಈ ಮಾಹಿತಿ ದರೋಡೆಕೋರರಿಂದ ನಮ್ಮನ್ನು ಸಂರಕ್ಷಿಕೊಳ್ಳಲು ಯಾವುದೇ ದಾರಿ ಇಲ್ಲದ ಹಾಗೆ ಮಾಡಿವೆ . ಯಾವುದೇ ಕಾನೂನಿನ ಸಹಾಯವಿಲ್ಲದೆ , ನಾವು ನಮ್ಮ ದಿನ ನಿತ್ಯದ ಬದುಕಿನಲ್ಲಿ , ಅಡಗಿ ಕೊಳಲು ಯತ್ನಿಸುತ್ತಿದ್ದೇವೆ ಹಾಗೂ ನಮ್ಮ ಮಕ್ಕಳು ಊಟದ ಸಮಯದಲ್ಲಿ ಎನ್ಕ್ರಿಪ್ಶನ್ ಬಗ್ಗೆ ಚರ್ಚಿಸುತ್ತಿದ್ದಾರೆ , ಮತ್ತು ಪ್ರತಿಭಟನಾಕಾರರು , ನಮ್ಮ ನಮ್ಮ ಕೌಟುಂಬಿಕ ಫೋಟೋಗಳ ಸಹಾಯದಿಂದ ನಿರ್ಮಿತವಾದ "ಮುಖದ ಚಹರೆ  ಗುರುತು ಹಿಡಿಯುವ " ಸಾಫ್ಟ್ ವೇರ್  ಗಳಿಂದ ತಪ್ಪಿಸಿ ಕೊಳ್ಳಲು ಮುಖಕ್ಕೆ  ಮಾಸ್ಕ್ ಬಳಸುತ್ತಿದ್ದಾರೆ .

ಯಾವುದೇ ರೀತಿಯ ಮಾಹಿತಿ ಹಕ್ಕುಗಳು ಮತ್ತು ನಿಯಮಗಳು ಇಲ್ಲದಿರುವ ಈ ಸಮಯದಲ್ಲಿ , ಬೇಹುಗಾರಿಕಾ ಬಂಡವಾಳಶಾಹಿಗಳು ನಮ್ಮ ಸಮಾಜವನ್ನು ಮರುಸೃಷ್ಟಿ ಮಾಡಲು ಪ್ರಯತ್ನಿಸುತ್ತಾ , ಪ್ರಜಾಪ್ರಭುತ್ವವನ್ನು ತಲೆಕೆಳಗಾಗಿಸುತ್ತಿವೆ . ಕೆಳಗಿಂದ , ನಿಧಾನವಾಗಿ , ಮನುಷ್ಯನ ಸಾಂಸ್ಥಿಕತೆಯನ್ನು , ಖಾಸಗೀತನವನ್ನು ಆಕ್ರಮಿಸಿಕೊಳ್ಳುತ್ತ , ಸ್ವಾತಂತ್ರ್ಯ ಕಸಿದುಕೊಳ್ಳುತ್ತ ,  ವ್ಯಕ್ತಿಗಳು ಹೋರಾಟ ಮಾಡದ ಹಾಗೆ ಪರಿಸ್ಥಿತಿ ಸೃಷ್ಟಿಸುತ್ತಿವೆ .ಮೇಲಿನಿಂದ  ಹೇರುತ್ತಿರುವ , ಮಾಹಿತಿ ಅಸಮಾನತೆ ಮತ್ತು ಅನ್ಯಾಯ ಮೂಲಭೂತವಾಗಿ ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿವೆ

ಈ ಬೇಹುಗಾರಿಕಾ   ಬಂಡವಾಳಶಾಹಿಗಳು ಕತ್ತಲೆಯಲ್ಲಿ ರಹಸ್ಯವಾಗಿ ಕಾರ್ಯ ನಿರ್ವಹಿಸುತ್ತಾರೆ ಎಂದು ನಮಗೆ ತಿಳಿದಿದೆ , ಆದರೆ ನಮ್ಮಿಂದ ಸಂಗ್ರಹಿಸಿದ ಮಾಹಿತಿಯನ್ನು ಏತಕ್ಕೆ ಬಳಸುತ್ತಾರೆ ನಮಗೆ ಸ್ಪಷ್ಟವಾಗಿ ತಿಳಿದಿಲ್ಲ . ನಮ್ಮ ಬಗ್ಗೆ ತಿಳಿದುಕೊಳ್ಳಲು ಅವರ ಬಳಿ ಎಲ್ಲ ವಿಧಾನಗಳಿವೆ , ಆದರೆ ಅವರ ಬಗ್ಗೆ ತಿಳಿದುಕೊಳ್ಳಲು ನಮ್ಮ ಬಳಿ ಯಾವುದೇ ದಾರಿ ಇಲ್ಲ . ನಮ್ಮ ಬಗೆಗಿನ ಮಾಹಿತಿ , ನಮಗಾಗಿ ಅಲ್ಲ . ಬದಲಾಗಿ ಇನ್ನೊಬ್ಬರ ಲಾಭಕ್ಕಾಗಿ ನಮ್ಮ ಮಾಹಿತಿ ಮಾರಾಟಕ್ಕಿದೆ . ೧೯೯೭ ರ Federal Trade Commission ಭೇಟಿಯ ನಂತರ ಆ ರೇಖೆಯನ್ನು ಎಳೆದೆ ಇಲ್ಲ , ಮತ್ತು ಜನರು ವ್ಯಾಪಾರ ಚರಾಸ್ತಿ ಯಾಗಿ ಬದಲಾಗಿದ್ದಾರೆ . ವಾಸ್ತವದಲ್ಲಿ ಬೇಹುಗಾರಿಕಾ   ಬಂಡವಾಳಶಾಹಿಗಳು ಡಿಜಿಟಲ್ ಮಾಧ್ಯಮವನ್ನು ನಮ್ಮಿಂದ ಕಸಿದುಕೊಂಡಿದ್ದಾರೆ ಹಾಗೂ ಅದು ನಾವು ಮೊದಲೇ ಅಂದಾಜು ಮಾಡಿರದ ವಾಸ್ತವವೇನಲ್ಲ

ಅಮೆರಿಕಾದ ಸಂಸದರು ಈ ಹೊಸ ಬಿಕ್ಕಟ್ಟನ್ನು ಎದುರಿಸಲು  ಮೀನಮೇಷ ಎಣಿಸುತ್ತಿರುವುದಕ್ಕೆ ಬಹಳಷ್ಟು ಕಾರಣಗಳಿವೆ . ಮುಖ್ಯವಾಗಿ , ಸೆಪ್ಟೆಂಬರ್ ೧೧ರ  ಭಯೋತ್ಪಾದಕರ ದಾಳಿಯ ನಂತ್ರ ಸೃಷ್ಟಿಯಾದ ಬೇಹುಗಾರಿಕಾ   ವ್ಯವಸ್ಥೆ , ಮತ್ತು

ವಯಕ್ತಿಕ ಹಿತಾಸಕ್ತಿ ಯ ಬಗ್ಗೆ ಸರ್ಕಾರದ ಬದಲಾದ ನಿಲುವು ಮತ್ತು "ಎಲ್ಲ ಬಗೆಯ ಮಾಹಿತಿ ಸಂಗ್ರಹಿಸುವ " ಹಂಬಲ . ರಾಜಕೀಯ ವಲಯದಲ್ಲಿ ಈ ಹೊಸ ಬೇಹುಗಾರಿಕಾ ವ್ಯವಸ್ಥೆ ಒಂದು ಹೊಸ ಭರವಸೆಯಾಗಿ ಕಾಣಲಾಗುತ್ತಿದೆ

ಬೇಹುಗಾರಿಕಾ ಬಂಡವಾಳಶಾಹಿಗಳು ತಮ್ಮನ್ನು ಸಂರಕ್ಷಿಸಿಕೊಳ್ಳಲು , ಸಾಕಷ್ಟು ಪ್ರಭಾವ ಬಳಸಿ , ವಿಧ ವಿಧವಾದ ಪ್ರಚಾರಗಳನು ಬಳಸಿ , ಸಂಸದರನ್ನು ಬೆದರಿಸಿ , ಗೊಂದಲ ಮೂಡಿಸಿ , ಯಾವುದೇ ಕ್ರಮಗಳನ್ನು ಕೈಗೊಳ್ಳದ ಹಾಗೆ ಮಾಡಿದ್ದಾರೆ . ಹಾಗಾಗಿ ಈ ಸಂಸ್ಥೆಗಳು, ಅವು ಮಾಡುವ ಹಾನಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಪರಿಶೀಲನೆಗೆ ಒಳಪಟ್ಟಿವೆ . ಈ ಎರಡು ಉದಾಹರಣೆಗಳನ್ನೇ ತೆಗೆದುಕೊಳ್ಳಿ

ಮೊದಲನೇ ವಾದ ಎಂದರೆ , ಪ್ರಜಾಪ್ರಭುತ್ವ ವ್ಯವಸ್ಥೆ ಸಮೃದ್ಧಿ ಮತ್ತು ಆವಿಷ್ಕಾರಗಳಿಗೆ ತೊಡಕು . ಈ ಹಿಂದಿನ ಗೂಗಲ್ ಅಧ್ಯಕ್ಷ Eric Schmidt ನ ೨೦೧೧ ಲೇಖನದ ಪ್ರಕಾರ , "ನಾವು ಅಂತರ್ಜಾಲದಿಂದ ನಮ್ಮ ಕೈ ಹೊರ ತೆಗೆದಿದ್ದೇವೆ ... ಸರ್ಕಾರಗಳು ಕಾನೂನು ನಿರ್ಮಿಸುವಲ್ಲಿ ತಪ್ಪು ಮಾಡಬಹುದು ಮತ್ತು ಅದರಿಂದಾಗಿ ಇಡೀ ವ್ಯವಸ್ಥೆ ಕುಂಟುತ್ತಾ ಸಾಗುತ್ತದೆ ಎನ್ನುವುದು ನಮಗೆ ಸ್ಪಷ್ಟವಾಗಿ ತಿಳಿದಿದೆ ಮತ್ತು ನಮಗೆ ಇದು ನಿಜಕ್ಕೂ ಆತಂಕಕಾರಿ ವಿಷಯ " . ಇದೆ ಬಗೆಯ ಯೋಚನಾ ಕ್ರಮ ಈ ಹಿಂದೆ ಬಳಸಿದ್ದವರು "Gilded Age barons", ಮಾತು ಅವರನ್ನು ಈಗ ನಾವು "ದರೋಡೆಕೋರರು" ಎಂದು ಕರೆಯುತ್ತೇವೆ . ಅವರ ವಾದ ಹೇಗಿತ್ತೆಂದರೆ , ಸಮಾಜಕ್ಕೆ ಯಾವುದೇ ಕಾನೂನು ಬೇಕಾಗಿಲ್ಲ "law of survival of the fittest" "he “laws of capital”ಮತ್ತು “law of supply and demand” ಇಷ್ಟೇ ಸಾಕು ಎಂಬುದಾಗಿತ್ತು

ವಾಸ್ತವದಲ್ಲಿ ಅವರ ವಾದಕ್ಕೆ ವಿರುದ್ಧವಾಗಿ , ಬೇಹುಗಾರಿಕಾ ಬಂಡವಾಳಶಾಹಿ ವ್ಯವಸ್ಥೆ ಯಾವುದೇ ಹೊಸ ಆವಿಷ್ಕಾರ ಮಾಡುವುದಿಲ್ಲ . ಬಹಳ ಆಶಾದಾಯಕವಾದ ಅರ್ಥಶಾಸ್ತ್ರದ ಸಂಶೋಧನೆಯ ಪ್ರಕಾರ , ಸರ್ಕಾರಿ ಮತ್ತು ಪ್ರಜಾಪ್ರಭುತ್ವದ ಸಂಸ್ಥೆಗಳು ಹೊಸ ಆವಿಷ್ಕಾರಗಳಿಗೆ ಸಹಾಯಕವಾಗಿವೆ ಹಾಗೂ ಈ ಹೊಸ ತಂತ್ರಜ್ಞಾನದ ದೈತ್ಯ ಸಂಸ್ಥೆಗಳು ಯಾವುದೇ ಹೊಸ ಅನ್ವೇಷಣೆ ಮಾಡುತ್ತಿಲ್ಲ ಎಂದು . ಈ ಸಂಸ್ಥೆಗಳ ಬಳಿ ಇರುವ ಮಾಹಿತಿ ಯನ್ನು ಇವತ್ತಿನ ಅತಿ ಮುಖ್ಯ ಸಮಸ್ಯೆಗಳಾದ , ಇಂಗಾಲ ರಾಹಿತ್ಯ ಇಂಧನದ ಅನ್ವೇಷಣೆಗಾಗಲಿ , ಹಸಿವಿನ ನಿವಾರಣೆಗಾಗಲಿ , ಕ್ಯಾನ್ಸರ್ ಪರಿಹಾರಕ್ಕಾಗಲಿ , ಸಮುದ್ರದಲ್ಲಿ ತೇಲುತ್ತಿರುವ ಕೋಟ್ಯಂತರ ಟನ್ ಪ್ಲಾಸ್ಟಿಕ್ ಸ್ವಚ್ಛಮಾಡಲಾಗಲಿ, ಅಕಾಡೆಮಿಕ್ , ವೈದ್ಯರನ್ನು ಸೃಷ್ಟಿಮಾಡಲಾಗಲಿ , ಯಾವುದಕ್ಕೂ ಸಹಾಯವಾಗುತ್ತಿಲ್ಲ . ಬದಲಾಗಿ , ಈ ಇಡೀ ವ್ಯವಸ್ಥೆಯನ್ನು ಮುನ್ನಡೆಸುತ್ತಿರುವವರು ಅತ್ಯಂತ ಶ್ರೀಮಂತರಾದ ಜಾಣರು ಮತ್ತು ಈ ಎಲ್ಲ "computational power" ಹಾಗೂ ಎಲ್ಲ ಸಂಪನ್ಮೂಲಗಳೂ ಲಾಭವನ್ನೇ ಗುರಿಯಾಗಿಸಿಕೊಂಡಿರುವ ಅರ್ಥ ವ್ಯವಸ್ಥೆಗಾಗಿ ದುಡಿಸಿಕೊಳ್ಳಲಾಗುತ್ತಿದೆ .

ಎರಡನೆಯ ಬಗೆಯ ವಾದ ಎಂದರೆ , ಈ ಮುಂಚೂಣಿಯಲ್ಲಿರುವ ಬೇಹುಗಾರಿಕಾ ಬಂಡವಾಳಶಾಹಿ ಸಂಸ್ಥೆಗಳ ಗೆಲುವು ಅವರು ಜನರಿಗೆ ಎಷ್ಟು ಉಪಯುಕ್ತವಾಗಿದ್ದಾರೆ ಎನ್ನುವುದರ ದ್ಯೋತಕ . ಆದರೆ ಬೇಡಿಕೆಯ ಬದಿಯಿಂದ ನೋಡಿದರೆ ಈ

ಹೊಸ ವ್ಯವಸ್ಥೆ ವಾಸ್ತವದಲ್ಲಿ ಒಂದು ಮಾರುಕಟ್ಟೆಯ ಸೋಲು . ಪೂರೈಕೆ ಮತ್ತು ಬೇಡಿಕೆಯ ನಡುವಿನ  ಕಂದರವನ್ನು ಕಡಿಮೆ ಮಾಡದೆ , ಜನರು ತಮ್ಮ ಬಳಿ ಇನ್ನ್ಯಾವುದೇ ಬಗೆಯ ಪರ್ಯಾಯ ವ್ಯವಸ್ಥೆ ಇಲ್ಲದ ಕಾರಣ , ಗ್ರಾಹಕರು ಈ ಬೇಹುಗಾರಿಕಾ ಬಂಡವಾಳಶಾಹಿಗಳ ರಹಸ್ಯ ಚಟುವಟಿಕೆಗಳು ಮತ್ತು ಪರಿಣಾಮಗಳನ್ನು ಅರಿತುಕೊಳ್ಳುವಲ್ಲಿ ಸಾಧ್ಯವಾಗದೆ , ಈ ವ್ಯವಸ್ಥೆಯಯನ್ನು ಬಳಸುತ್ತಿದ್ದಾರೆ .  Pew Research Center ಇತ್ತೀಚೆಗೆ ನಡೆಸಿದ ಸಮೀಕ್ಷೆಯ ಪ್ರಕಾರ ೮೧% ಅಮೇರಿಕಾದ ಜನರು ಈ ಕಂಪನಿಗಳು ಸಂಗ್ರಹಿಸುವ ಮಾಹಿತಿಗಳಿಂದಾಗುವ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು ಮತ್ತು ಈ ಕಂಪನಿಗಳ ಯಶಸ್ಸು ಅವಲಂಬಿತವಾಗಿರುವುದು ಬಲ ಪ್ರಯೋಗ ಮತ್ತು ಗೊಂದಲಮಯವಾಗಿಸಿಯೇ ಹೊರತು ಜನರ ನಿಜವಾದ ಅವಶ್ಯಕತೆಗಳನ್ನು ಪೂರೈಸಿಯಲ್ಲ ಎಂದು ಹೇಳಿದ್ದಾರೆ

ಇತಿಹಾಸಕಾರ Thomas McCraw ತನ್ನ ಪ್ರಶಸ್ತಿ ವಿಜೇತ ಪುಸ್ತಕ "history of regulation" ದಲ್ಲಿ ಒಂದು ಎಚ್ಚರಿಕೆಯ ಸಂದೇಶ ನೀಡುತ್ತಾನೆ . ಶತಮಾನಗಳಿಂದ "ಕಾನೂನು ನಿರ್ಮಿಸುವವರು ತಾವು ಕಾನೂನು ನಿರ್ಮಿಸುತ್ತಿರುವ ಉದ್ಯಮಕ್ಕೆ ಹೋಲುವ ಹಾಗೆ ಕಾನೂನು ನಿರ್ಮಿಸಲಾಗದೆ ಸೋತಿದ್ದಾರೆ ". ಈಗಿರುವ "privacy and antitrust"  ಕಾನೂನುಗಳು ಅತ್ಯಂತ ಅಗತ್ಯ ಆದರೆ ಇವುಗಳಷ್ಟೇ ಇವತ್ತು ಸೃಷ್ಟಿಯಾಗಿರುವ "ಮಾಹಿತಿ ಅಸಮಾನತೆಯನ್ನು " ಹೋಗಲಾಡಿಸಲು ಸಾಧ್ಯವಿಲ್ಲ .

೨೧ನೇ ಶತಮಾನದ ಈ ಸ್ಪರ್ಧಾ ಪ್ರಪಂಚಕ್ಕೆ  ಹೊಸದೇ ಆದ ಕಾನೂನಿನ ಚೌಕಟ್ಟು ಮತ್ತು ಮಾಹಿತಿ ಹಕ್ಕುಗಳು ನಮ್ಮ ಪ್ರಜಾಪ್ರಭುತ್ವದ ಕಾನೂನಿನ ಚೌಕಟ್ಟಿನ ಒಳಗಡೆ ಸೇರಬೇಕು . ಈ ಬಗೆಯ ಹಕ್ಕುಗಳು ಮಾಹಿತಿ ಹಂಚುವ ಮತ್ತು ಹಂಚುವ ಮೊದಲು ಬಳಕೆದಾರರ ಗಮನಕ್ಕೆ ತರುತ್ತವೆ ಹಾಗು ಅವುಗಳ ದುರುಪಯೋಗವನ್ನು ತಡೆಯುತ್ತವೆ . ಒಬ್ಬ ವ್ಯಕ್ತಿಯ ಬದುಕನ್ನು ಅಂಕಿಅಂಶಗಳಾಗಿ ಬದಲಾಯಿಸುವ ಹಕ್ಕು ಸಂಪೂರ್ಣವಾಗಿ ಆ ವ್ಯಕ್ತಿಗೆ ಸೇರಿರಬೇಕಾಗಿದ್ದು ಪ್ರಜಾಪ್ರಭುತ್ವದ ಮೂಲಭೂತ ಲಕ್ಷಣ . ಅದರ ಅರ್ಥ , ಈ ಸಂಸ್ಥೆಗಳು ನಮ್ಮ ಮುಖ ಚಹರೆಯ ಮೇಲೆ  ಹಕ್ಕನ್ನು ಹೊಂದಲಾಗುವುದಿಲ್ಲ , ಮತ್ತು ತಮ್ಮ ಲಾಭಕ್ಕಾಗಿ ಅದನ್ನು ಮಾರಿಕೊಳ್ಳುವ ಹಾಗಿಲ್ಲ .  ಈ ಮಾಹಿತಿ ಹಕ್ಕುಗಳ ಬಗ್ಗೆ ಚರ್ಚೆ ಈಗಾಗಲೇ ಶುರುವಾಗಿದೆ , ಮತ್ತು "Amnesty International"ನ ವರದಿಯಲ್ಲಿ ಈಗಾಗಲೇ ದಾಖಲಾಗಿದೆ

ಬೇಡಿಕೆಯ ಕಡೆಯಿಂದ , ನಾವು "ಮನುಷ್ಯನ ಭವಿಷ್ಯದ " ಬಗೆಗಿನ ಮಾರುಕಟ್ಟೆಗಳನ್ನು ಕಾನೂನು ಬಾಹಿರ ಮಾಡಿ , ಇವುಗಳಿಂದ ಉತ್ಪಾದನೆಯಾಗುತ್ತಿರುವ ಹಣಕಾಸು ಲಾಭವನ್ನು ನಿಯಂತ್ರಿಸಬಹುದು . ಇದೇನು ಅಂತಹ ಅಸಾಧ್ಯವಾದ ಬದಲಾವಣೆಯಲ್ಲ . ಉದಾಹರಣೆಗೆ , ಸಮಾಜಗಳು ಮನುಷ್ಯನ ಅಂಗಾಗಳನ್ನು , ಶಿಶುಗಳನ್ನು ಮತ್ತು ಗುಲಾಮರನ್ನು ಮಾರುವುದನ್ನು ಕಾನೂನು ಬಾಹಿರ ಮಾಡಿದ್ದೇವೆ . ಮತ್ತು ಈ ಎಲ್ಲ ಸಂದರ್ಭಗಳಲ್ಲೂ ಸಹ ಇಂತಹ ಮಾರುಕಟ್ಟೆಗಳು ನೈತಿಕವಾಗಿ ಅಸಹ್ಯಕರ ಮತ್ತು ಇಂಥಹವು ನಾವು ಅಂದಾಜಿಸುವ ಹಾಗೆಯೇ ಹಿಂಸಾ ಕೃತ್ಯಗಳಲ್ಲಿ ಕೊನೆಯಾಗುತ್ತವೆ ಎಂದು ನಮಗೆ ತಿಳಿದಿದೆ. ಈ ಮನುಷ್ಯನ ಭವಿಷ್ಯದ ಮಾರುಕಟ್ಟೆಗಳೂ ಕೂಡ ಇಂಥಹಃದೆ  ಫಲಿತಾಂಶ ನೀಡಿ ನಮ್ಮ ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತವೆ ಎಂದು ತೋರಿಸಬಹುದು .

ಒಂದು ಸ್ಪರ್ಧಾತ್ಮಕ ಹೊಸ ವ್ಯವಸ್ಥೆಯನ್ನು ಸೃಷ್ಟಿಸಲು , ಕಾನೂನು ನಿಮಾಣಮಾಡುವವರು ಹೊಸ ಬಗೆಯ ಯೋಚನಾಕ್ರಮಗಳನ್ನು ಅಳವಡಿಸಿಕೊಂಡು , ಶತಮಾನಗಳ ಹಿಂದೆ ವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳಿಗೆ ಹೋರಾಡಿದ ಹಾಗೆ , ಸಂಘಟಿತರಾಗಿ ಹೋರಾಡಿ ಈ ಏಕ ಸ್ವಾಮ್ಯತೆ ಸಾಧಿಸರುವ ಬಂಡವಾಳಶಾಹಿ ಸಂಸ್ಥೆಗಳನ್ನು ನಿಯಂತ್ರಿಸಬೇಕು . ನಮ್ಮ ಸಂಸದರು , ಇಂತಹ ಅನಿಯಂತ್ರಿತ ಶಕ್ತಿಗಳ ಬಗ್ಗೆ ಎಚ್ಚೆತ್ತಿರುವ ಜನಗಳ ಜತೆ ಕೈ ಜೋಡಿಸಬೇಕು ಮತ್ತು ಇಂತಹ ಬೇಹುಗಾರಿಕಾ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳ ರಕ್ಷಣೆಗೆ ನಿಲ್ಲಬೇಕು

ಮನುಷ್ಯನಿಂದ ನಿರ್ಮಿತವಾದ ಏನನ್ನಾದರೂ ಮನುಷ್ಯನೇ ನೆಲಗೆಡವಬಹುದು . ಬೇಹುಗಾರಿಕಾ ಬಂಡವಾಳಶಾಹಿ ವ್ಯವಸ್ಥೆ ಇನ್ನೂ ಹೊಸತು , ಕೇವಲ ೨೦ ವರ್ಷ ಹಿಂದಿನದು , ಆದರೆ ಪ್ರಜಾಪ್ರಭುತ್ವ ಹಳೆಯದು , ಹಲವಾರು ತಲೆಮಾರುಗಳ ಭರವಸೆ ಮತ್ತು ಹೋರಾಟದಿಂದ ನಿರ್ಮಿತವಾಗಿರುವುದು

ಬೇಹುಗಾರಿಕಾ ಬಂಡವಾಳ ಶಾಹಿಗಳು ಶ್ರೀಮಂತರು ಮತ್ತು ಶಕ್ತಿಶಾಲಿಗಳು , ಆದರೆ ಅವರಿಗೆ ದುರ್ಬಲತೆಗಳೇ ಇಲ್ಲ ಅನ್ನುವ ಹಾಗೇನಿಲ್ಲ. ಅವರಿಗೂ ಒಂದು ದುರ್ಬಲತೆಯಿದೆ , ಅದೇ ಭಯ . ಅವರಿಗೆ ಕಾನೂನು ನಿರ್ಮಿಸುವವರ ಮೇಲೆ ಭಯವಿದೆ . ಹೊಸ ಸಾಧ್ಯತೆಗಳನ್ನು ಹುಡುಕುತ್ತಿರುವ , ಮತ್ತದೇ ಹಳೆಯ ಪ್ರಶ್ನೆಗಳಾದ ಹೊಸ ಉತ್ತರ ಹುಡುಕುತ್ತಿರುವ ನಾಗರೀಕರ ಬಗ್ಗೆಗೆ ಭಯವಿದೆ , ಯಾರಿಗೆ ತಿಳಿದಿರಬೇಕು ? ಯಾರಿಗೆ ತಿಳಿದಿರಬೇಕು ಎಂದು ನಿರ್ಧರಿಸುವವರು ಯಾರು ? ಯಾರು ನಿರ್ಧರಿಸಬೇಕು ಎಂದು ನಿರ್ಧರಿಸುವವರು ಯಾರು ? ಸಂಗೀತ ಬರೆಯುವವರು ಯಾರು ಮತ್ತು ಆ ಸಂಗೀತಕ್ಕೆ ನರ್ತಿಸುವವರು ಯಾರು ? .

**ಕನ್ನಡಕ್ಕೆ:** ಮಂಜುನಾಥ್ ಚಾರ್ವಾಕ

**ಮೂಲ :** https://www.nytimes.com/2020/01/24/opinion/sunday/surveillance-capitalism.html